# ದೀರ್ಘಗದ್ಯ



# ಕೃಷ್ಣೇಗೌಡನ ಆನೆ

* ಕೆ.ಪಿ. ಪೂರ್ಣಚಂದ್ರ ತೇಜಸ್ವಿ

**ಅ. ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ :**

1. ನಮ್ಮ ಕಡೆ ಕೆಮ್ಮು ಕಾಲಿಂಗ್‌ಬೆಲ್ ಇದ್ದಹಾಗೆ.

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ಲೇಖಕರು ಓದುಗರಿಗೆ ಹೇಳುತ್ತಾರೆ.
* ಒಂದು ದಿನ ಲೇಖಕರು ತಮ್ಮ ಹಳೆಯ ಫೋರ್ಡ್ ಜೀಪಿನ ಕೆಳಗೆ ಬಿದ್ದುಕೊಂಡು ಅದರ ಗೇರ್‌ಬಾಕ್ಸ್ ರಿಪೇರಿ ಮಾಡುತ್ತಿರುತ್ತಾರೆ. ಆಗ ಖಾಕಿ ಪ್ಯಾಂಟ್ ಧರಿಸಿರುವ ಒಬ್ಬ ಜೀಪಿನ ಬಳಿ ಬರುತ್ತಾನೆ. ಬಂದ ವ್ಯಕ್ತಿ ಲೇಖಕರು ತಾನು ಬಂದಿದ್ದನ್ನು ಗಮನಿಸಿಲ್ಲವೆಂದು ಬಗೆದು ಒಂದೆರಡು ಬಾರಿ ಕೆಮ್ಮುತ್ತಾನೆ. ಏಕೆಂದರೆ ಕರೆಯಲು ಭಾಷೆಯನ್ನು ಉಪಯೋಗಿಸಬೇಕಾದರೆ ಕೆಲವು ತೊಂದರೆಗಳಿವೆ ಆದ್ದರಿಂದ ಕೆಮ್ಮಿ ಕ್ಯಾಕರಿಸಿ ಗಲಾಟೆ ಮಾಡುತ್ತಾರೆ. ನಮ್ಮ ಕಡೆ ಕೆಮ್ಮು ಕಾಲಿಂಗ್‌ಬೆಲ್ ಇದ್ದಹಾಗೆ ಎಂದು ಲೇಖಕರು ಓದುಗರಿಗೆ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** ಕೆಲವು ಕಡೆಗಳಲ್ಲಿ ಕೆಮ್ಮನ್ನು ಹೇಗೆ ಬಳಸಿಕೊಳ್ಳುತ್ತಿದ್ದರು ಎನ್ನುವುದನ್ನು ಲೇಖಕರು ಈ ಮಾತಿನ ಮೂಲಕ ತಿಳಿಸುತ್ತಾರೆ.

**2. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ.**

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ನಿರೂಪಕರು ಓದುಗರಿಗೆ ಹೇಳುತ್ತಾರೆ.
* ಕೃಷ್ಣೆಗೌಡ ಮರಗಳನ್ನು ಸಾಗಿಸುವ ಗುತ್ತಿಗೆಯನ್ನು ಪಡೆಯಲು ಗೂಳೂರು ಮಠದಿಂದ ಆನೆಯನ್ನು ಕೊಂಡುಕೊಳ್ಳುತ್ತಾನೆ. ಈಗಾಗಲೇ ಎಲ್ಲಾ ತರಹದ ವ್ಯವಹಾರಗಳನ್ನು ಮಾಡಿ ಎಲ್ಲದರಲ್ಲೂ ನಷ್ಟ ಅನುಭವಿಸಿ ಸೋತು ಹೋಗಿದ್ದ ಕೃಷ್ಣೇಗೌಡ ಆನೆಯನ್ನು ತಂದಾಗ ಅವನ ಊರಿನವರು ಇಲ್ಲಿಗೆ ಇವನ ಕತೆ ಮುಗಿಯಿತು ಎಂದು ತೀರ್ಮಾನಿಸುತ್ತಾರೆ. ಮನೆ ಮಠ ಸಂಪೂರ್ಣ ಹಾಳುಮಾಡಿಕೊಂಡು ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಇದೆಂದು ಅವರೆಲ್ಲ ನಂಬಿದ್ದರು

ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬರುತ್ತದೆ.

**ಸ್ವಾರಸ್ಯ** : ಆನೆಯನ್ನು ಸಾಕುವುದು ಆರ್ಥಿಕವಾಗಿ ಕಷ್ಟದ ಮಾರ್ಗ ಎಂಬುದನ್ನು ಈ ಮಾತು ತಿಳಿಸುತ್ತದೆ.

**3. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೊ.**

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ಊರಿನವರು ರಹಮಾನ್ ಸಾಬಿಗೆ ಹೇಳುತ್ತಾರೆ.
* ಆನೆ ತನ್ನ ಪೆಟ್ಟಿಗೆ ಅಂಗಡಿಯನ್ನು ಬಾಳೆಹಣ್ಣಿಗಾಗಿ ದೂಡಿ ಬೀಳಿಸಿತೆಂದು ಒಮ್ಮೆ ರಹಮಾನ್ ಸಾಬಿಯು ಗಲಾಟೆ ಮಾಡುತ್ತಾನೆ. ಆದರೆ ಅಲ್ಲಿಯೇ ಸುಮ್ಮನೆ ನಿಂತಿದ್ದ ಆನೆಯನ್ನು ನೋಡಿದ ಜನ ಆನೆ ಆ ರೀತಿ ಮಾಡಲು ಸಾಧ್ಯವಿಲ್ಲ ಎಂದು ವಾದಿಸುತ್ತಾರೆ. ಅದಕ್ಕೆ ರಹಮಾನ್ ಸಾಬಿ ಘಟನೆ ನಡೆದಾಗ ಸ್ಥಳದಲ್ಲಿದ್ದ ಜುಬೇದಳನ್ನು ಸಾಕ್ಷಿ ಹೇಳುವಂತೆ ಕೇಳುತ್ತಾನೆ. ಆದರೆ ಜುಬೇದ ರಹಮಾನ್ ಆನೆಗೆ ಎರಡು ಅನ್ನಬಾರದ ಮಾತು ಹೇಳಿದ್ದರಿಂದ ಆನೆ ಆತನ ಅಂಗಡಿಯನ್ನು ದೂಡಿತು ಎನ್ನುತ್ತಾಳೆ. ಈ ಸಂದರ್ಭದಲ್ಲಿ ಅಲ್ಲಿದ್ದ ಜನರು ಪ್ರಸ್ತುತ ವಾಕ್ಯವನ್ನು ಹೇಳುತ್ತಾರೆ.

**ಸ್ವಾರಸ್ಯ** : ಊರಿನವರು ಆನೆಗೆ ಒಂದು ವ್ಯಕ್ತಿತ್ವವನ್ನು ಆರೋಪಿಸಿದ್ದನ್ನು ಈ ಮಾತಿನಿಂದ ತಿಳಿಯಬಹುದು.

**4. ನನ್ನ ಕೊಡಲಿ ಯಾಕೆ ತಂದು ಆಫೀಸಿನಲ್ಲಿ ಇಟ್ಕೊಂಡಿದ್ದೀರ?**

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ಲೇಖಕರು ಫಾರೆಸ್ಟರ್ ನಾಗರಾಜನನ್ನು ಕೇಳುತ್ತಾರೆ.
* ಲೈನ್‌ಮನ್ ದುರ್ಗಪ್ಪ ಲೇಖಕರ ಮನೆಗೆ ಬಂದು ಕೊಂಬೆ ಕತ್ತರಿಸಲು ಕೊಡಲಿ ಬೇಕೆಂದು ತೆಗೆದುಕೊಂಡು ಹೋಗಿ ಮೂರು ದಿನವಾದರೂ ಮರಳಿಸಿರುವುದಿಲ್ಲ. ಮೂರು ದಿನಗಳ ಬಳಿಕ ಪೇಟೆಯಲ್ಲಿ ನಿರೂಪಕರಿಗೆ ಸಿಕ್ಕಿದ ದುರ್ಗಪ್ಪ, ಅರಣ್ಯ ಇಲಾಖೆಯವರು ಮರವನ್ನು ಕತ್ತರಿಸುತ್ತಿದ್ದಿಯಾ ಎಂದು ಕೊಡಲಿಯನ್ನು ಕಿತ್ತುಕೊಂಡಿದ್ದಾರೆ ಎಂದು ಹೇಳುತ್ತಾನೆ. ನನ್ನ ಕೊಡಲಿಯನ್ನು ಅವರೇಕೆ ಕಿತ್ತುಕೊಂಡರು ಎಂದು ಯೋಚಿಸಿದ ನಿರೂಪಕರು ಇದನ್ನು ಪ್ರಶ್ನಿಸಲು ಆತನೊಂದಿಗೆ ಅರಣ್ಯ ಇಲಾಖೆಯ ಕಚೇರಿಗೆ ಬರುತ್ತಾರೆ. ಅಲ್ಲಿದ್ದ ಫಾರೆಸ್ಟರ್ ನಾಗರಾಜನಿಗೆ ನಿಮ್ಮ ಡಿಪಾರ್ಟ್‌ಮೆಂಟಿನ ಮರ ಕಡಿದರೆ ನೀವು ದುರ್ಗಪ್ಪನ ಮೇಲೆ ಕ್ರಮಕೈಗೊಳ್ಳಿ ಎಂದು ಹೇಳುತ್ತಾ ನಿರೂಪಕರು ಈ ಮೇಲಿನ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ** : ಕೊಡಲಿಯ ಮೇಲೆ ವ್ಯಾಮೋಹವಿಲ್ಲದಿದ್ದರೂ ತರಲೆ ಕೇಸುಗಳ ಜಾಡು ಹಿಡಿದು ವಿಷಯ ತಿಳಿದುಕೊಳ್ಳುವ ನಿರೂಪಕರ ಕುತೂಹಲವನ್ನು ಇಲ್ಲಿ ಗಮನಿಸಬಹುದು.



**5. ವೆಪನ್ ಸಾರ್, ವೆಪನ್ ನಮಗೆ ಮುಖ್ಯ.**

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ಫಾರೆಸ್ಟರ್ ನಾಗರಾಜ ನಿರೂಪಕರಿಗೆ ಹೇಳುತ್ತಾರೆ.
* ಲೈನ್‌ಮನ್ ದುರ್ಗಪ್ಪ ಲೇಖಕರ ಮನೆಗೆ ಬಂದು ಕೊಂಬೆ ಕತ್ತರಿಸಲು ಕೊಡಲಿ ಬೇಕೆಂದು ತೆಗೆದುಕೊಂಡು ಹೋಗಿ ಮೂರು ದಿನವಾದರೂ ಮರಳಿಸಿರುವುದಿಲ್ಲ. ಮೂರು ದಿನಗಳ ನಂತರ ಕೊಡಲಿಯನ್ನು ಅರಣ್ಯ ಇಲಾಖೆಯವರು ಕಿತ್ತುಕೊಂಡಿರುವುದು ಲೇಖಕರಿಗೆ ತಿಳಿಯುತ್ತದೆ. ಆಗ ಅವರು ಅರಣ್ಯ ಇಲಾಖೆಯ ಕಚೇರಿಗೆ ಬಂದು ಅಲ್ಲಿದ್ದ ಫಾರೆಸ್ಟರ್ ನಾಗರಾಜನಿಗೆ ನಿಮ್ಮ ಡಿಪಾರ್ಟ್‌ಮೆಂಟಿನ ಮರ ಕಡಿದವರ ಮೇಲೆ ಕ್ರಮಕೈಗೊಳ್ಳಿ. ಆದರೆ ನನ್ನ ಕೊಡಲಿ ಯಾಕೆ ತಂದು ಆಫೀಸಿನಲ್ಲಿ ಇಟ್ಕೊಂಡಿದ್ದೀರ? ಎಂದು ಪ್ರಶ್ನಿಸುತ್ತಾರೆ. ಆಗ ಫಾರೆಸ್ಟರ್ ನಾಗರಾಜ ಅವರಿಗೆ ಕುಳಿತುಕೊಳ್ಳಲು ಹೇಳಿ ಈ ಮೇಲಿನ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ಒಬ್ಬ ಅಧಿಕಾರಿಗೆ ಅಪರಾಧ ನಡೆದಾಗ ಸಾಕ್ಷಿಯೇ ಮುಖ್ಯವಾಗುತ್ತದೆ ಎನ್ನುವ ವ್ಯಂಗ್ಯವನ್ನು ಇಲ್ಲಿ ಗುರುತಿಸಬಹುದು.

**6. ನಿನ್ನ ಪುಕಾರೇನಿದ್ರೂ ಬರ್ವಣಿಗೇಲಿ ಇರಬೇಕು.**

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ಫಾರೆಸ್ಟರ್ ನಾಗರಾಜ ಲೈನ್‌ಮನ್ ದುರ್ಗಪ್ಪನಿಗೆ ಹೇಳುತ್ತಾರೆ.
* ತನ್ನ ಕೊಡಲಿಯನ್ನು ಅರಣ್ಯ ಇಲಾಖೆಯವರು ಕಿತ್ತಿಟ್ಟಿರುವ ವಿಚಾರ ತಿಳಿದು ನಿರೂಪಕರು ದುರ್ಗಪ್ಪನೊಂದಿಗೆ ಇಲಾಖೆಯ ಕಚೇರಿಗೆ ಹೋಗುತ್ತಾರೆ. ಅಲ್ಲಿ ನಾಗರಾಜ ಹಾಗೂ ನಿರೂಪಕರ ನಡುವೆ ಮಾತುಕತೆಯಾಗಿ ನಾಗರಾಜ ಗಾರ್ಡ್ ರಾಮಪ್ಪನಿಗೆ ಕೊಡಲಿ ಕೊಟ್ಟುಬಿಡುವಂತೆ ಹೇಳುತ್ತಾನೆ. ಆದರೆ ದುರ್ಗಪ್ಪ ಮಾತ್ರ ತಾನು ಮರ ಕಡಿದಿಲ್ಲ, ಆನೆ ಕೊಂಬೆ ಬೀಳಿಸಿತು ಎನ್ನುವ ಮಾತನ್ನು ಪುನರಾವರ್ತಿಸುತ್ತಾನೆ. ಇದರಿಂದ ಕೋಪಗೊಂಡ ನಾಗರಾಜ ಆನೆ ಕೊಂಬೆ ಬೀಳಿಸಿತೆಂದು ಬರೆದುಕೊಟ್ಟರೆ ಆನೆಯನ್ನು ಕಟ್ಟಾಕಿ ಬರೆ ಹಾಕುತ್ತೀನಿ ಎಂದು ಹೇಳುವಾಗ ಈ ಮೇಲಿನ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ದೂರುಗಳು ಬರವಣಿಗೆಯಲ್ಲಿದ್ದರೆ ಮಾತ್ರ ಅದಕ್ಕೆ ಬೆಲೆ ಎನ್ನುವುದನ್ನು ಈ ಮಾತು ತಿಳಿಸುತ್ತದೆ.

**7. ಡ್ರೈವರಣ್ಣ ಎತ್ಲಾಗಿ ಹೋದ! ಇಲ್ಲೇ ಇದ್ದನಲ್ಲ!**

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ಲಾರಿಯ ಕ್ಲೀನರ್ ನಾಯರ್ ತನ್ನಲ್ಲೇ ಈ ಮೇಲಿನಂತೆ ಗೊಣಗಿಕೊಳ್ಳುತ್ತಾನೆ.

*   ಒಂದು ಬಾರಿ ಶಿವೇಗೌಡರ ಸಾಮಿಲ್ಲಿಗೆ ರಾತ್ರಿಯ ವೇಳೆ ಬಂದ ಕಳ್ಳನಾಟವನ್ನು ಇಳಿಸಲು ಮಾವುತ ವೇಲಾಯುಧ ಆನೆಯನ್ನು ಕರೆದುಕೊಂಡು ಹೋಗಿರುತ್ತಾನೆ. ಆ ಸಂದರ್ಭ ಲಾರಿಯ ಕ್ಲೀನರ್ ನಾಯರ್ ಚಾ ಕುಡಿಯಲು ಹೋಗಿದ್ದರೆ, ಡ್ರೈವರ್ ಲಾರಿಯಲ್ಲಿ ನಿದ್ರಿಸುತ್ತಿರುತ್ತಾನೆ. ಆಗ ಷರಾಬಿನ ನಿಶೆಯಲ್ಲಿದ್ದ ಮಾವುತ ವೇಲಾಯುಧನಿಗೆ ನಾಟಗಳಿಗೆ ಬಿಗಿದ ಹಗ್ಗ ಬಿಚ್ಚಬೇಕೆನ್ನುವುದು ಮರೆತು, ಆನೆಗೆ ನಾಟವನ್ನು ಉರುಳಿಸಲು ಸೂಚನೆ ಕೊಡುತ್ತಾನೆ. ಆನೆ ನಾಟವನ್ನು ನೂಕುವಾಗ ಮರದೊಂದಿಗೆ ಲಾರಿಯೂ ಉರುಳಿದಾಗ ಅದರೊಳಗಿದ್ದ ಡ್ರೈವರ್‌ನ ತಲೆಗೆ ಕ್ಯಾಬಿನಿನ್ನಲ್ಲಿ ಇಟ್ಟಿದ್ದ ಮಣಭಾರದ ಜಾಕ್ ಬಿದ್ದು ಆತ ಸಾವನಪ್ಪುತ್ತಾನೆ. ಆಗ ಅಲ್ಲಿಗೆ ಓಡಿಬಂದ ಕ್ಲೀನರ್ ನಾಯರ್ ಹಗ್ಗ ಬಿಚ್ಚುವ ಬದಲಿಗೆ ಡ್ರೈವರನ್ನು ಹುಡುಕುತ್ತಾ ಈ ಮೇಲಿನಂತೆ ಗೊಣಗಿಕೊಳ್ಳುತ್ತಾನೆ.

**ಸ್ವಾರಸ್ಯ :** ಡ್ರೈವರ್ ಸತ್ತಿರುವುದನ್ನು ತಿಳಿಯದ ಕ್ಲೀನರ್ ಆತಂಕದಿಂದ ಆತನನ್ನು ಹುಡುಕುವುದನ್ನು ಇಲ್ಲಿ ಗಮನಿಸಬಹುದು.

**8. ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ.**

*   ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.

*   ಈ ಮಾತನ್ನು ಲೈನ್‌ಮನ್ ದುರ್ಗಪ್ಪ ನಿರೂಪಕರಿಗೆ ಹೇಳುತ್ತಾನೆ.

*   ನಿರೂಪಕರಿಗೆ ಕೊಡಲಿಯನ್ನು ಹಿಂದಿರುಗಿಸಲೆಂದು ಬಂದ ದುರ್ಗಪ್ಪ ಹಿಂದೊಮ್ಮೆ ಶಿವೇಗೌಡ ಸಾಮಿಲ್ಲಿನಲ್ಲಿ ನಾಟ ತುಂಬಿದ್ದ ಲಾರಿಯನ್ನು ಆನೆ ಉರುಳಿಸಿದಾಗ ಸತ್ತ ಡ್ರೈವರ್‌ನ ಶವವನ್ನು ಹೇಗೆ ಬೂದಿ ಮಾಡಲಾಯಿತು ಎಂದು ಹೇಳುತ್ತಾನೆ. ನಂತರ ಅಷ್ಟು ಬಲಿಷ್ಠವಾಗಿರುವ ಆನೆಗೆ ಹೆಂಡ ಕುಡಿಸಿದರೆ ಅಪಾಯ ತಪ್ಪಿದಲ್ಲ. ಅದು ಅಲ್ಲದೆ ಮಕ್ಕಳು ಮರಿ ಓಡಾಡುವ ಜಾಗದಲ್ಲಿ ಅದು ಓಡಾಡುತ್ತಿರುತ್ತದೆ. ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ. ನಮ್ಮಂತೋರು ನಮಃಶಿವಾಯ ಅನ್ನೋದಕ್ಕೆ ಎಂದು ಹೇಳುತ್ತಾನೆ.

**ಸ್ವಾರಸ್ಯ :** ಆನೆಯ ಶಕ್ತಿ ಸಾಮರ್ಥ್ಯವನ್ನು ಕಂಡು ದುರ್ಗಪ್ಪನಿಗೆ ಉಂಟಾಗಿರುವ ಆತಂಕವನ್ನು ಇಲ್ಲಿ ಗಮನಿಸಬಹುದು.

**9. ಹದಿನಾಲ್ಕು ಇಂಜಕ್ಷನ್ ಹೊಟ್ಟೆಗೆ ಚುಚ್ಚುಸ್ಕೊತೀನಿ.**

*   ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.

*   ಈ ಮಾತನ್ನು ಜಬ್ಬಾರ್ ನಿರೂಪಕರಿಗೆ ಹೇಳುತ್ತಾನೆ.

*   ಒಂದುದಿನ ವೆಟರ್ನರಿ ಆಸ್ಪತ್ರೆಯ ಮುಂದೆ ಪೋಸ್ಟ್‌ಮ್ಯಾನ್ ಜಬ್ಬಾರ್ ನಿರೂಪಕರಿಗೆ ಸಿಗುತ್ತಾನೆ. ಆಗ ನಿರೂಪಕರು ಆತನಿಗೆ ಕೆಲವು ದಿನಗಳಿಂದ ಏಕೆ ನೀನು ಕಾಣಿಸಲಿಲ್ಲ ಎಂದು ಪ್ರಶ್ನಿಸುತ್ತಾರೆ. ಆಗ ಜಬ್ಬಾರ್ ತಾನು ಪೋಸ್ಟ್ ಕೊಡಲು ಹೋದಾಗ ನಾಯಿಯೊಂದು ಕಚ್ಚಿರುವುದರಿಂದ ಇಂಜೆಕ್ಷನ್ ತೆಗೆದುಕೊಳ್ಳಲು ಹೋದರೆ ಆಸ್ಪತ್ರೆಯಲ್ಲಿ ಇಂಜೆಕ್ಷನ್ ಸ್ಟಾಕ್ ಇಲ್ಲ. ಪ್ರತಿ ವರ್ಷವೂ ಒಂದಲ್ಲ ಒಂದು ನಾಯಿ ನನಗೆ ಕಚ್ಚುತ್ತಿರುತ್ತದೆ.



ಅದು ಹುಚ್ಚು ನಾಯೋ ಅಲ್ಲವೋ ಒಟ್ಟಿನಲ್ಲಿ ನಾನಂತೂ ಇಂಜೆಕ್ಷನ್ ತೆಗೆದುಕೊಳ್ಳಲೇಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** ನಾಯಿ ಕಡಿತದ ಬಗ್ಗೆ ಜಬ್ಬಾರ್‌ಗಿರುವ ಭಯ ಈ ಮಾತಿನಿಂದ ವ್ಯಕ್ತವಾಗುತ್ತದೆ.

**10. ಕೃಷ್ಣೇಗೌಡರ ಆನೆಗೂ ಕಚ್ಚಿದೆ ಅಂತ ವರ್ತಮಾನ ಉಂಟಪ್ಪ.**

*   ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.

*   ಈ ಮಾತನ್ನು ವೆಟರ್ನರಿ ಸ್ಟಾಕ್‌ಮನ್ ಪುಟ್ಟಯ್ಯನು ನಿರೂಪಕ ಹಾಗೂ ಜಬ್ಬಾರ್‌ನನ್ನು ಕುರಿತು ಈ ಮಾತನ್ನು ಹೇಳುತ್ತಾನೆ.

*   ಜಬ್ಬಾರ್ ನಾಯಿ ಕಡಿತಕ್ಕೆ ಇಂಜೆಕ್ಷನ್ ಪಡೆಯಲು ಆಸ್ಪತ್ರೆಗೆ ಹೋದಾಗ ಅಲ್ಲಿ ಇಂಜೆಕ್ಷನ್ ಸ್ಟಾಕ್ ಇರುವುದಿಲ್ಲ. ಆ ಸಂದರ್ಭದಲ್ಲಿ ಆತನಿಗೆ ಲೇಖಕರು ಹಾಗೂ ಸ್ಟಾಕ್‌ಮನ್ ಪುಟ್ಟಯ್ಯ ಸಿಗುತ್ತಾರೆ. ಆಗ ಮೂವರು ಪಟ್ಟಣದಲ್ಲಿ ಹೆಚ್ಚಾಗಿರುವ ಬೀದಿ ನಾಯಿ ಹಾಗೂ ಹುಚ್ಚು ನಾಯಿಗಳ ಹಾವಳಿಯ ಕುರಿತು ಚರ್ಚಿಸುತ್ತಾರೆ. ಆಗ ಪುಟ್ಟಯ್ಯ ನಿರೂಪಕರನ್ನು ಕುರಿತು ನಿನ್ನೆ ಹುಚ್ಚು ನಾಯಿ ಏಳು ಜನ ಹಾಗೂ ಹತ್ತಾರು ದನಗಳಿಗೆ ಕಚ್ಚಿದೆ. ಅವರಿಗೆಲ್ಲಾ ಎಲ್ಲಿಂದ ಇಂಜೆಕ್ಷನ್ ಸಪ್ಲೆ ಮಾಡೋಕಾಗುತ್ತೆ ಎಂದು ಹೇಳಿ ಕೊಂಚ ದನಿಯನ್ನು ತಗ್ಗಿಸಿ ಈ ಮೇಲಿನ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ಕೃಷ್ಣೇಗೌಡರ ಆನೆಯ ಕುರಿತು ಊರಿನಲ್ಲಿ ಇಲ್ಲಸಲ್ಲದ ಗಾಳಿಸುದ್ಧಿ ಹರಡುವುದನ್ನು ಇಲ್ಲಿ ಗಮನಿಸಬಹುದು.

**11. ನಂಗೇನು ಈ ನಾಯಿಗಳನ್ನು ಕಂಡರೆ ಪ್ರೀತಿನಾ ಸ್ವಾಮಿ!**

*   ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.

*   ಈ ಮಾತನ್ನು ಮುನಿಸಿಪಲ್ ಅಧ್ಯಕ್ಷ ಖಾನ್ ಸಾಹೇಬ ನಿರೂಪಕರಿಗೆ ಹೇಳುತ್ತಾರೆ.

*   ಜಬ್ಬಾರ್ ನಾಯಿ ಕಡಿತಕ್ಕೆ ಇಂಜೆಕ್ಷನ್ ಪಡೆಯಲು ಆಸ್ಪತ್ರೆಗೆ ಹೋದಾಗ ಅಲ್ಲಿ ಇಂಜೆಕ್ಷನ್ ಸ್ಟಾಕ್ ಇರುವುದಿಲ್ಲ. ಆ ಸಂದರ್ಭದಲ್ಲಿ ಆತನಿಗೆ ನಿರೂಪಕರು ಹಾಗೂ ಸ್ಟಾಕ್‌ಮನ್ ಪುಟ್ಟಯ್ಯ ಸಿಗುತ್ತಾರೆ. ಆಗ ಜಬ್ಬಾರ್ ಹಾಗೂ ಪುಟ್ಟಯ್ಯ ಇಬ್ಬರೂ ಸೇರಿ ನಿರೂಪಕರಿಗೆ ನಾಯಿ ಹಾವಳಿ ಹೆಚ್ಚಾಗಿರುವುದರಿಂದ ಮುನಿಸಿಪಲ್ ಪ್ರೆಸಿಡೆಂಟರ ಮೇಲೆ ಕೋಪ ಬರುವಂತೆ ಮಾತನಾಡುತ್ತಾರೆ. ಇದರಿಂದ ಕೋಪಗೊಂಡ ನಿರೂಪಕರು ಈ ಬಗ್ಗೆ ಪ್ರಶ್ನಿಸಲು ಮುನಿಸಿಪಲ್ ಆಫೀಸಿಗೆ ಹೋಗಿ ಅಲ್ಲಿದ್ದ ಮುನಿಸಿಪಲ್ ಅಧ್ಯಕ್ಷ ಖಾನ್ ಸಾಹೇಬರನ್ನು ಪ್ರಶ್ನಿಸಿದಾಗ ಆತ ಈ ಮೇಲಿನ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ಮುನಿಸಿಪಲ್ ಅಧ್ಯಕ್ಷ ಖಾನ್ ಸಾಹೇಬ ತನ್ನನ್ನು ಸಮರ್ಥಿಸಿಕೊಳ್ಳುತ್ತಿರುವುದನ್ನು ಇಲ್ಲಿ ತಿಳಿಯಬಹುದು.

## 12. ಹೊರಗಡೆಯಿಂದ ಎಕ್ಸ್‌ಪೋರ್ಟ್ ಆದವು.

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ಮುನಿಸಿಪಲ್ ಅಧ್ಯಕ್ಷ ಖಾನ್ ಸಾಹೇಬ ಲೇಖಕರಿಗೆ ಹೇಳುತ್ತಾರೆ.
* ಪಟ್ಟಣದಲ್ಲಿ ಬೀದಿ ನಾಯಿ ಹಾಗೂ ಹುಚ್ಚು ನಾಯಿಗಳ ಸಂಖ್ಯೆ ಹೆಚ್ಚಾಗಿದೆಯೆಂಬ ವರ್ತಮಾನದ ಹಿನ್ನಲೆಯಲ್ಲಿ ನಿರೂಪಕರು ಮುನಿಸಿಪಲ್ ಅಧ್ಯಕ್ಷ ಖಾನ್ ಸಾಹೇಬನ ಮೇಲೆ ಕೋಪಗೊಳ್ಳುತ್ತಾರೆ. ಈ ಬಗ್ಗೆ ವಿಚಾರಿಸಲು ಅವರು ಮುನಿಸಿಪಲ್ ಕಚೇರಿಗೆ ಬಂದ ಅವರು ಈ ಬಗ್ಗೆ ಖಾನ್ ಸಾಹೇಬನನ್ನು ಪ್ರಶ್ನಿಸುತ್ತಾರೆ. ಆಗ ಖಾನ್ ಸಾಹೇಬ ತಾನು ಬೀದಿನಾಯಿಗಳ ಹಾವಳಿಯ ಕುರಿತು ಕ್ರಮಕೈಕೊಂಡಿದ್ದೇನೆ. ಮೂಡಿಗೆರೆಯಲ್ಲಿ ಬೀದಿ ನಾಯಿಗಳ ಸಂಖ್ಯೆ ಹೆಚ್ಚಿರುವುದು ನಿಜ. ಆದರೆ ಅವೆಲ್ಲ ಇಲ್ಲಿಯ ನಾಯಿಗಳಲ್ಲ ಎಂದು ಹೇಳುತ್ತಾ ಪ್ರಸ್ತುತ ವಾಕ್ಯವನ್ನು ಹೇಳುತ್ತಾನೆ.

**ಸ್ವಾರಸ್ಯ :** ತನ್ನ ವೈಫಲ್ಯವನ್ನು ಮುಚ್ಚಿ ಹಾಕಲು ಖಾನ್ ಸಾಹೇಬ ನೀಡುವ ಸಬೂಬನ್ನು ಇಲ್ಲಿ ಗಮನಿಸಬಹುದು.

## 13. ಮುನ್ಸಿಪಾಲ್ ಪ್ರೆಸಿಡೆಂಟಾಗಿ ಊರನ್ನು ಸ್ವಚ್ಛವಾಗಿಡೋದು ನಿಮ್ಮ ಕರ್ತವ್ಯ

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ನಿರೂಪಕರು ಮುನಿಸಿಪಲ್ ಅಧ್ಯಕ್ಷ ಖಾನ್ ಸಾಹೇಬರಿಗೆ ಹೇಳುತ್ತಾರೆ.
* ಪಟ್ಟಣದಲ್ಲಿ ಬೀದಿ ನಾಯಿ ಹಾಗೂ ಹುಚ್ಚು ನಾಯಿಗಳ ಸಂಖ್ಯೆ ಹೆಚ್ಚಾಗಿದೆಯೆಂಬ ವರ್ತಮಾನದ ಹಿನ್ನಲೆಯಲ್ಲಿ ನಿರೂಪಕರು ಮುನಿಪಲ್ ಅಧ್ಯಕ್ಷ ಖಾನ್ ಸಾಹೇಬನ ಮೇಲೆ ಕೋಪಗೊಳ್ಳುತ್ತಾರೆ. ಈ ಬಗ್ಗೆ ವಿಚಾರಿಸಲು ಅವರು ಮುನಿಸಿಪಲ್ ಕಚೇರಿಗೆ ಬಂದ ಅವರು ಈ ಬಗ್ಗೆ ಖಾನ್ ಸಾಹೇಬನನ್ನು ಪ್ರಶ್ನಿಸುತ್ತಾರೆ. ಆದರೆ ಖಾನ್ ಸಾಹೇಬ ಮಾತ್ರ ಈ ಬಗ್ಗೆ ತಾನು ಕ್ರಮಕೈಕೊಂಡಿದ್ದೇನೆ ಎಂದು ಹೇಳುತ್ತಾ ತನ್ನನ್ನು ಸಮರ್ಥಿಸಿಕೊಳ್ಳಲು ಇಲ್ಲಸಲ್ಲದ ಸಬೂಬುಗಳನ್ನು ಕೊಡುತ್ತಾನೆ. ಆಗ ನಿರೂಪಕರು ಖಾನ್ ಸಾಹೇಬರೆ ನೀವು ಸಣ್ಣಪುಟ್ಟ ವಿಷಯ ಎಲ್ಲ ತಗೊಂಡುಬಂದು ಧರ್ಮಕ್ಕೆ ಗಂಟಾಕಿ ಸುಮ್ಮಸುಮ್ಮನೆ ಕಾಂಪ್ಲಿಕೇಟ್ ಮಾಡ್ತಿದ್ದೀರ ಎಂದು ಹೇಳುತ್ತಾ ಈ ಮೇಲಿನ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** ನಿರೂಪಕರು ಮುನಿಸಿಪಲ್ ಅಧ್ಯಕ್ಷ ಖಾನ್ ಸಾಹೇಬನಿಗೆ ತಮ್ಮ ಕರ್ತವ್ಯದ ಬಗ್ಗೆ ಈ ಮಾತಿನಿಂದ ಎಚ್ಚರಿಸುತ್ತಾರೆ.

## 14. ಕಂಬದ ಮೇಲೆ ಯಾಕೋ ಕೈಲಾಸ ಕಂಡ ಹಾಗೆ ಇದೆಯಲ್ಲಾ.

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ಟೆಲಿಫೋನ್ ಲೈನ್‌ಮನ್ ಶಂಕರ ಇಂಜಿನಿಯರ್ ರಮೇಶ್ ಬಾಬುವಿಗೆ ಹೇಳುತಾನೆ.



* ಮೂಡಿಗೆರೆಯಿಂದ ನುಗ್ಗೆಹಳ್ಳಿಯ ಕಡೆ ಸಾಗಿದ್ದ ಜಂಕ್ಷನ್ ಬಾಕ್ಸ್ ಇದ್ದ 17 ನೇ ಟೆಲಿಫೋನ್ ಕಂಬದಲ್ಲಿನ ಸಮಸ್ಯೆಯನ್ನು ಸರಿಪಡಿಸುವ ಸಂದರ್ಭ ಲೈನ್‌ಮನ್ ತಿಪ್ಪಣ ಕಂಬದ ಮೇಲೆ ರಿಪೇರಿ ಮಾಡುವ ಭಂಗಿಯಲ್ಲಿಯೇ ಮೃತಪಟ್ಟಿರುತ್ತಾನೆ. ಆದರೆ ಈ ಬಗ್ಗೆ ಮಾಹಿತಿಯಿರದ ಜೂನಿಯರ್ ಇಂಜಿನಿಯರ್ ರಮೇಶ್ ಬಾಬು ಹಾಗೂ ಲೈನ್‌ಮನ್ ಶಂಕರ ಸಮಸ್ಯೆಯನ್ನು ಸರಿಪಡಿಸಲು 17 ನೇ ಕಂಬದ ಬಳಿ ಬರುತ್ತಾರೆ. ಆದರೆ ಕಂಬದ ಮೇಲೆ ರಿಪೇರಿ ಮಾಡುವ ಭಂಗಿಯಲ್ಲಿದ್ದ ತಿಪ್ಪಣನನ್ನು ನೋಡಿ ಅವನನ್ನು ಕರೆಯುತ್ತಾರೆ. ಆದರೆ ಆತ ಪ್ರತಿಕ್ರಿಯಿಸದಿರುವುದನ್ನು ನೋಡಿ ಏನಾಯ್ತು ಇವನಿಗೆ ಎಂದು ಹೇಳುತ್ತಾ ಈ ಮೇಲಿನ ಮಾತನ್ನು ಲೈನ್‌ಮನ್ ಶಂಕರ ಇಂಜಿನಿಯರ್ ರಮೇಶ್ ಬಾಬುವಿಗೆ ಹೇಳುತ್ತಾನೆ.

**ಸ್ವಾರಸ್ಯ :** ತಿಪ್ಪಣ್ಣ ಪ್ರತಿಕ್ರಿಯಿಸದಿರುವುದನ್ನು ನೋಡಿ ಲೈನ್‌ಮನ್ ಶಂಕರನಿಗೆ ಉಂಟಾಗ ಕಳವಳವನ್ನು ಇಲ್ಲಿ ಗಮನಿಸಬಹುದು.

## 15. ಈ ಕಂಬದೊಳ್ಗೆ ಏನೋ ಸೇರ್‌ಕೊಂಡಿದೆ.

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ಟೆಲಿಫೋನ್ ಲೈನ್‌ಮನ್ ಶಂಕರ ಇಂಜಿನಿಯರ್ ರಮೇಶ್ ಬಾಬುವಿಗೆ ಹೇಳುತ್ತಾನೆ.
* ಮೂಡಿಗೆರೆಯಿಂದ ನುಗ್ಗೆಹಳ್ಳಿಯ ಕಡೆ ಸಾಗಿದ್ದ ಜಂಕ್ಷನ್ ಬಾಕ್ಸ್ ಇದ್ದ 17 ನೇ ಟೆಲಿಫೋನ್ ಕಂಬದಲ್ಲಿನ ಸಮಸ್ಯೆಯನ್ನು ಸರಿಪಡಿಸುವ ಸಂದರ್ಭ ಲೈನ್‌ಮನ್ ತಿಪ್ಪಣ ಕಂಬದ ಮೇಲೆ ಮೃತಪಟ್ಟಿರುತ್ತಾನೆ. ಈ ಬಗ್ಗೆ ಮಾಹಿತಿಯಿರದ ಜೂನಿಯರ್ ಇಂಜಿನಿಯರ್ ರಮೇಶ್ ಬಾಬು ಹಾಗೂ ಲೈನ್‌ಮನ್ ಶಂಕರ ಅಲ್ಲಿಗೆ ಬಂದು ರಿಪೇರಿ ಮಾಡುವ ಭಂಗಿಯಲ್ಲಿ ಪ್ರತಿಕ್ರಿಯಿಸದೆ ಕುಳಿತಿರುವುದನ್ನು ನೋಡಿ ಅನುಮಾನಗೊಳ್ಳುತ್ತಾರೆ. ರಮೇಶ್ ಬಾಬುವಿನ ಮಾತಿನಂತೆ ಶಂಕರ ಕಂಬ ಹತ್ತಿ ತಿಪ್ಪಣ್ಣನ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದಾಗ, ಕಂಬದಿಂದ ವಿದ್ಯುತ್ ಶಾಕ್ ಹೊಡೆದಂತಾಗಿ ಕಿರುಚುತ್ತಾನೆ. ಆಗ ಏನಾಯಿತು ಎಂದು ಕೇಳಿದ ರಮೇಶ್ ಬಾಬುವಿಗೆ, ಇದ್ದಕ್ಕಿದ್ದಂತೆ ಸಿಡ್ಲು ಹೊಡೆದಂತಾಯ್ತು ಸಾರ್ ಎಂದು ಹೇಳುತ್ತಾ ಈ ಮೇಲಿನ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ಕಂಬವನ್ನು ಹತ್ತಲು ಹೊರಟ ಲೈನ್‌ಮನ್ ಶಂಕರನಿಗಾದ ಅನುಭವ ಈ ಮಾತಿನಿಂದ ವ್ಯಕ್ತವಾಗುತ್ತದೆ.

## 16. ಆನೆ ಬೇಲಿ ದಾಟಿ ಹೋಯ್ತು ಸಾರ್.

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ಈ ಮಾತನ್ನು ಗಾರ್ಡ್ ರಾಮಪ್ಪ ಫಾರೆಸ್ಟರ್ ನಾಗರಾಜನಿಗೆ ಹೇಳುತ್ತಾನೆ.
* ಜನರ ದೂರು ಹಾಗೂ ಮೇಲಾಧಿಕಾರಿಗಳ ಒತ್ತಡದಿಂದಾಗಿ ಫಾರೆಸ್ಟರ್ ನಾಗರಾಜ

ರಾತ್ರಿಯ ವೇಳೆ ಆನೆ ಲಾಯದಿಂದ ಹೊರಬಂದರೆ ಗುಂಡು ಹೊಡೆಯುವುದಾಗಿ ನಿರ್ಧರಿಸಿ, ಮೇಲಾಧಿಕಾರಿಗಳಿಂದ ಅನುಮತಿಯನ್ನು ಪಡೆಯುತ್ತಾನೆ. ಅದರಂತೆ ಆತ ಒಂದು ರಾತ್ರಿ ಆನೆ ಲಾಯದಿಂದ ಹೊರಬರುತ್ತದೆಯೋ ಇಲ್ಲವೋ ಎನ್ನುವುದನ್ನು ತಿಳಿಯಲು ಹೆಸರುವಾಸಿಯಾದ ಶಿಕಾರಿ ಗಂಡಿಯೊಂದರಲ್ಲಿ ಕುಳಿತು ಕಾಯುತ್ತಿರುತ್ತಾನೆ. ಆಗ ಅಲ್ಲಿಗೆ ಕೋವಿಯೊಂದಿಗೆ ಓಡಿಬಂದ ಗಾರ್ಡ್ ರಾಮಪ್ಪ ನಾಗರಾಜನಿಗೆ ಈ ಮೇಲಿನ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ರಾಮಪ್ಪನಿಗೆ ಉಂಟಾದ ಆತಂಕವನ್ನು ಇಲ್ಲಿ ಗಮನಿಸಬಹುದು.

**17. ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.**

* ಈ ಮಾತನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಕೃಷ್ಣೇಗೌಡನ ಆನೆ' ಎಂಬ ದೀರ್ಘಗದ್ಯದಿಂದ ಆಯ್ದುಕೊಳ್ಳಲಾಗಿದೆ.
* ನಾಗರಾಜ ಕಾಣೆಯಾದಾಗ ಪೊಲೀಸರು ಈ ರೀತಿಯಾಗಿ ಮಹಜರಿನಲ್ಲಿ ದಾಖಲಿಸಿಕೊಳ್ಳುತ್ತಾರೆ.
* ಜನರ ದೂರು ಹಾಗೂ ಮೇಲಾಧಿಕಾರಿಗಳ ಒತ್ತಡದಿಂದಾಗಿ ಫಾರೆಸ್ಟರ್ ನಾಗರಾಜ ರಾತ್ರಿಯ ವೇಳೆ ಆನೆ ಲಾಯದಿಂದ ಹೊರಬಂದರೆ ಗುಂಡು ಹೊಡೆಯುವುದಾಗಿ ನಿರ್ಧರಿಸಿ, ಮೇಲಾಧಿಕಾರಿಗಳಿಂದ ಅನುಮತಿಯನ್ನು ಪಡೆಯುತ್ತಾನೆ. ಅದರಂತೆ ಆತ ಒಂದು ರಾತ್ರಿ ಆನೆ ಲಾಯದಿಂದ ಹೊರಬರುತ್ತದೆಯೋ ಇಲ್ಲವೋ ಎನ್ನುವುದನ್ನು ತಿಳಿಯಲು ಪ್ರಸಿದ್ಧ ಶಿಕಾರಿ ಗಂಡಿಯೊಂದರಲ್ಲಿ ಕುಳಿತು ಕಾಯುತ್ತಿರುತ್ತಾನೆ. ಆಗ ಅಲ್ಲಿಗೆ ಬಂದ ಗಾರ್ಡ್ ರಾಮಪ್ಪನ ಆನೆ ಬೇಲಿ ದಾಟಿ ಹೊರಹೋಯಿತೆಂಬ ಮಾತು ಕೇಳಿ ಅಲ್ಲಿಗೆ ಓಡಿದ ನಾಗರಾಜ ಮತ್ತೆಂದು ಯಾರ ಕಣ್ಣಿಗೂ ಕಾಣಿಸುವುದಿಲ್ಲ. ನಾಗರಾಜ ಸತ್ತಿರಬಹುದು ಎಂದು ಊಹಿಸಿದ ಪೊಲೀಸರು ಪ್ರಕರಣದ ನಿಗೂಢತೆಯನ್ನು ಭೇದಿಸಲಾಗದೆ ಮಹಜರಿನ ಸಂದರ್ಭ ಈ ಮೇಲಿನಂತೆ ಬರೆದುಕೊಳ್ಳುತ್ತಾರೆ ಎಂದು ನಿರೂಪಕರು ಈ ಮೇಲಿನಂತೆ ಹೇಳುತ್ತಾರೆ.

**ಸ್ವಾರಸ್ಯ :** ಫಾರೆಸ್ಟರ್ ನಾಗರಾಜನ ಪ್ರಕರಣವನ್ನು ಪೊಲೀಸರಿಂದ ಭೇದಿಸಲಾಗದಿರುವುದು ಈ ಮಾತಿನಿಂದ ವ್ಯಕ್ತವಾಗುತ್ತದೆ.

**ಆ. ಒಂದು ಅಂಕದ ಪ್ರಶ್ನೆಗಳು :**

**1. ನಿರೂಪಕರಿಗೆ ಯಾವ ಕೆಲಸ ಖಾಯಮ್ಮಾಗಿತ್ತು?**

ತಿಂಗಳಿಗೊಮ್ಮೆ ಜೀಪಿನ ಅಡಿಯಲ್ಲಿ ಬಿದ್ದುಕೊಂಡು ಅದರ ಗೇರ್‌ಬಾಕ್ಸ್ ಬಿಚ್ಚಿ ರಿಪೇರಿ ಮಾಡುವ ಕೆಲಸ ನಿರೂಪಕರಿಗೆ ಖಾಯಮ್ಮಾಗಿತ್ತು.

**2. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು?**

ದುರ್ಗಪ್ಪ ಕೊಡಲಿಯನ್ನು ಕೇಳಿ ಪಡೆಯಲು ಬಂದಿದ್ದನು.

**3. ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಯಾವುದು?**



ದುರ್ಗಪ್ಪನ ಪ್ರಕಾರ ಟೆಲಿಫೋನ್ ಡಿಪಾರ್ಟ್‌ಮೆಂಟ್ ತರ್ಲೆ ಡಿಪಾರ್ಟ್‌ಮೆಂಟ್ ಆಗಿತ್ತು.

**4. ಕೃಷ್ಣೇಗೌಡರ ಆನೆ ಮೊದಲು ಮಠದಲ್ಲಿತ್ತು?**

ಕೃಷ್ಣೇಗೌಡರ ಆನೆ ಮೊದಲು ಗೂಳೂರು ಮಠದಲ್ಲಿತ್ತು.

**5. ಕೃಷ್ಣೇಗೌಡರ ಆನೆಯ ಹೆಸರೇನು?**

ಕೃಷ್ಣೇಗೌಡರ ಆನೆಯ ಹೆಸರು ಗೌರಿ.

**6. ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋದುದೇಕೆ?**

ಮಠದ ಗುರುಗಳನ್ನು ಜನರು ಅಡ್ಡಪಲ್ಲಕಿಯಲ್ಲಿ ತಮ್ಮ ಹೆಗಲಮೇಲೇ ಹೊರತೊಡಗಿದ್ದರಿಂದ ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋಯಿತು.

**7. ಆನೆಯ ಮಾವುತನ ಹೆಸರೇನು?**

ಆನೆಯ ಮಾವುತನ ಹೆಸರು ವೇಲಾಯುಧ.

**8. ರಹಮಾನ್ 'ಐ ವಿಟ್‌ನೆಸ್' ಎಂದು ಯಾರನ್ನು ತೋರಿಸಿದನು?**

ರಹಮಾನ್ 'ಐ ವಿಟ್‌ನೆಸ್' ಎಂದು ಜುಬೇದಳನ್ನು ತೋರಿಸುತ್ತಾನೆ.

**9. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು?**

ನಿರೂಪಕರ ಇಕಾಲಜಿಸ್ಟ್ ಗೆಳೆಯ ಪ್ರಕಾಶ.

**10. ಆನೆ ಇಲ್ಲದ್ದರಿಂದ ವೇಲಾಯುಧ ಎಲ್ಲಿ ಕೆಲಸಕ್ಕೆ ಸೇರಿದ?**

ಆನೆ ಇಲ್ಲದ್ದರಿಂದ ವೇಲಾಯುಧ ಶಿವೇಗೌಡರ ಸಾಮಿಲ್ಲಿನಲ್ಲಿ ಕೆಲಸಕ್ಕೆ ಸೇರುತ್ತಾನೆ.

**11. ಶಿವೇಗೌಡರು ರಾತ್ರೋರಾತ್ರಿ ಆನೆ ಕರೆದುಕೊಂಡು ಹೋದುದ್ದೇಕೆ?**

ತನ್ನ ಸಾಮಿಲ್ಲಿಗೆ ಬಂದಿದ್ದ ಕಳ್ಳನಾಟವನ್ನು ಇಳಿಸಲು ಶಿವೇಗೌಡರು ರಾತ್ರೋರಾತ್ರಿ ಆನೆ ಕರೆದುಕೊಂಡು ಹೋದರು.

**12. ಪೋಸ್ಟ್‌ಮನ್ ಜಬ್ಬಾರನಿಗೆ ಒದಗಿದ ತೊಂದರೆ ಏನು?**

ನಾಯಿ ಕಚ್ಚಿದ್ದು ಹಾಗೂ ಅಲ್ಲಲ್ಲಿ ಪೋಸ್ಟ್‌ಬಾಕ್ಸ್‌ಗಳನ್ನು ಅಂಚೆ ಇಲಾಖೆ ನೇತು ಹಾಕಿದ್ದರಿಂದ ಪೋಸ್ಟ್‌ಮನ್ ಜಬ್ಬಾರನಿಗೆ ತೊಂದರೆಯಾಯಿತು.

**13. ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ಬರಲು ಕಾರಣವೇನು?**

ನಾಯಿ ಕಚ್ಚಿದ್ದರಿಂದ ಇಂಜೆಕ್ಷನ್ ತೆಗೆದುಕೊಳ್ಳಲು ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ಬರುತ್ತಾನೆ.

**14. ಮುನ್ಸಿಪಾಲಿಟಿ ಪ್ರೆಸಿಡೆಂಟರ ಹೆಸರೇನು?**

ಮುನ್ಸಿಪಾಲಿಟಿ ಪ್ರೆಸಿಡೆಂಟರ ಹೆಸರು ಖಾನ್ ಸಾಹೇಬ.

**15. ನಿರೂಪಕರ ಪ್ರಕಾರ ಮುನ್ಸಿಪಾಲಿಟಿ ಪ್ರೆಸಿಡೆಂಟರ ಕರ್ತವ್ಯ ಯಾವುದು?**

ನಿರೂಪಕರ ಪ್ರಕಾರ ಊರನ್ನು ಸ್ವಚ್ಛವಾಗಿಡುವುದು ಮುನ್ಸಿಪಾಲಿಟಿ ಪ್ರೆಸಿಡೆಂಟರ ಕರ್ತವ್ಯವಾಗಿದೆ.

**16. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು?**

ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ತಿಪ್ಪಣ್ಣ.

**17. ಟೆಲಿಫೋನ್ ಸಿಬ್ಬಂದಿ ಯಾರ ವಿರುದ್ಧ ಮುಷ್ಕರ ಹೂಡಿದರು?**

ಟೆಲಿಫೋನ್ ಸಿಬ್ಬಂದಿ ಎಲೆಕ್ಟ್ರಿಕ್(ಕರೆಂಟ್) ಡಿಪಾರ್ಟ್‌ಮೆಂಟಿನ ವಿರುದ್ಧ ಮುಷ್ಕರ ಹೂಡಿದರು.

**18. ಯಾವ ವಿಷಯ ಪ್ರಸ್ತಾಪಿಸಲು ಲೇಖಕರು ಮೀಟಿಂಗಿಗೆ ಹೋಗಿದ್ದರು?**

ಕಂತ್ರಿನಾಯಿಗಳ ವಿಷಯ ಪ್ರಸ್ತಾಪಿಸಲು ಲೇಖಕರು ಮೀಟಿಂಗಿಗೆ ಹೋಗಿದ್ದರು.

**19. ರೇಂಜರ್ ಆನೆಗೆ ಶೂಟ್ ಮಾಡುವಂತೆ ಯಾರಿಗೆ ಸೂಚಿಸಿದರು?**

ರೇಂಜರ್ ಆನೆಗೆ ಶೂಟ್ ಮಾಡುವಂತೆ ಫಾರೆಸ್ಟರ್ ನಾಗರಾಜನಿಗೆ ಸೂಚಿಸಿದರು.

**20. ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?**

ಆನೆಶಾಸ್ತ್ರದವನು ಆನೆಯಿಂದ ಐದು ಜನ ಪ್ರಾಣ ಕಳೆದುಕೊಳ್ಳುತ್ತಾರೆ ಎಂದು ಭವಿಷ್ಯ ನುಡಿದಿದ್ದನು.

**21. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ?**

ಕೃಷ್ಣೇಗೌಡರ ತೋಟದ ಮೂಲೆಯಲ್ಲಿ ಬಿಳಿ ಬೂರುಗದ ಮರದ ಕೆಳಗೆ ಒಳ್ಳೆ ಆಯಕಟ್ಟಿನ ಶಿಕಾರಿಗಂಡಿಯಲ್ಲಿ ನಾಗರಾಜ ಕೋವಿ ಹಿಡಿದು ಕುಳಿತಿದ್ದ.

**22. ಪೊಲೀಸರು ಏನೆಂದು ಮಹಜರು ಬರೆದುಕೊಂಡರು?**

ಪೊಲೀಸರು ನಾಗರಾಜನ ಕೋವಿ ಸಿಕ್ಕಿದೆ, ಆದರೆ ಹೆಣ ಸಿಗಲಿಲ್ಲ ಎಂದು ಮಹಜರು ಬರೆದುಕೊಂಡರು.

ಇ. ಎರಡು ಅಂಕಗಳ ಪ್ರಶ್ನೆಗಳು :

**1. ನಮ್ಮ ಕಡೆ ಕೆಮ್ಮುವುದು ಕಾಲಿಂಗ್ ಬೆಲ್ ಇದ್ದ ಹಾಗೆ ಎಂದು ನಿರೂಪಕರು ಹೇಳುವುದೇಕೆ?**

ನಮ್ಮ ಕಡೆ ಮನೆಯ ಬಳಿ ಯಾರು ಕಾಣದಿದ್ದಾಗ ಕೆಮ್ಮಿ ಕ್ಯಾಕರಿಸಿ ಗಲಾಟೆ ಮಾಡಲು ಬಹುಶಃ ಭಾಷೆ ಉಪಯೋಗಿಸಿ ಕರೆಯಲು ಇರುವ ತೊಂದರೆಗಳೆ ಕಾರಣ. ಮನೆಯವರ ಹೆಸರು ಏನು? ಹೆಸರು ಹಿಡಿದು ಕರೆಯಬೇಕೋ? ಸ್ವಾಮಿ ಎನ್ನಬೇಕೋ? ಬಹುವಚನ ಉಪಯೋಗಿಸಬೇಕೋ? ಏಕವಚನವೋ? ಎನ್ನುವ ಸಮಸ್ಯೆಗಳು



ಭಾಷೆಯನ್ನು ಬಳಸಿ ಕರೆಯುವಾಗ ಉಂಟಾಗುತ್ತದೆ. ಭಾಷೆಯ ಬದಲು ಒಂದೆರಡು ಸಾರಿ ಕೆಮ್ಮಿದರೆ ಈ ಸಮಸ್ಯೆಗಳು ಇರುವುದಿಲ್ಲ. ಆದ್ದರಿಂದ ನಮ್ಮ ಕಡೆ ಕೆಮ್ಮುವುದು ಕಾಲಿಂಗ್ ಬೆಲ್ ಇದ್ದ ಹಾಗೆ ಎಂದು ನಿರೂಪಕರು ಹೇಳುತ್ತಾರೆ.

**2. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?**

ದುರ್ಗಪ್ಪನ ಮಾತು ಕೇಳಿದ ನಿರೂಪಕರಿಗೆ ಆತ ಕೆಲಸವಿಲ್ಲದೆ ಪುರುಸೊತ್ತಾಗಿದ್ದರಿಂದ ಇಲ್ಲಿಗೆ ಬಂದಿರಬಹುದೆನಿಸಿತು. ಹಾಗಾದರೆ ಆತ ಇನಾಮು ಕೇಳಲೋ ಅಥವಾ ಚಂದಾ ವಸೂಲಿಗೋ, ಇಲ್ಲವೇ ಮನೆ ಉಪಯೋಗಕ್ಕೆ ಕಾಫಿ ಬೀಜವನ್ನೋ ಏಲಕ್ಕಿಯನ್ನೊ ಕೇಳಲು ಬಂದಿರಬಹುದು ಎಂದು ನಿರೂಪಕರು ಯೋಚಿಸುತ್ತಾರೆ.

**3. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?**

ಕೃಷ್ಣೇಗೌಡರ ಆನೆ ಕಾಡಿನಿಂದ ಹಿಡಿದು ತಂದು ಪಳಗಿಸಿದ ಆನೆಯಾಗಿರಲಿಲ್ಲ. ಘಟ್ಟದ ಕೆಳಗಿದ್ದ ಗೂಳೂರು ಮಠದಲ್ಲಿದ್ದ ಆನೆಯೊಂದರ ಮರಿಯೇ ಕೃಷ್ಣೇಗೌಡರ ಆನೆ. ಈ ಆನೆ ಹುಟ್ಟಿದ್ದು ಬೆಳೆದದ್ದು ಎಲ್ಲ ಊರಿನ ಜನಗಳ ನಡುವೆಯೆ ಆಗಿತ್ತು. ಆದ್ದರಿಂದ ಕೃಷ್ಣೇಗೌಡರ ಆನೆಗೆ ಕಾಡಿನ ಪರಿಚಯವಾಗಲಿ ಹಾಗೂ ಕಾಡಾನೆಗಳ ಬಗೆಯಾಗಲಿ ಏನೂ ತಿಳುವಳಿಕೆ ಇರಲಿಲ್ಲ.

**4. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?**

ವೇಲಾಯುಧನು ಇಪ್ಪತ್ತನಾಲ್ಕು ಗಂಟೆಯೂ ಕುಡಿದೇ ಇರುತ್ತಿದ್ದರಿಂದ ಆತ ಮಠದ ಸಾತ್ವಿಕ ವಾತಾವರಣಕ್ಕೆ ದೊಡ್ಡ ತಲೆ ನೋವಾಗಿದ್ದ. ತನ್ನ ದುರ್ನಡತೆಯಿಂದಾಗಿ ಆತ ಮಠದಿಂದ ಒಮ್ಮೆ ಛೀಮಾರಿಯನ್ನು ಕೂಡ ಹಾಕಿಸಿಕೊಂಡಿದ್ದ. ಆದರೆ ಆನೆ ಇರುವವರೆಗೆ ತನ್ನ ಅನಿವಾರ್ಯತೆಯನ್ನು ಅರಿತುಕೊಂಡ ಆತ ಮಠಕ್ಕೆ ಮತ್ತಷ್ಟು ಕಿರುಕುಳವನ್ನು ನೀಡಲಾರಂಭಿಸಿದ. ಆನೆಗಿಂತ ವೇಲಾಯುಧನನ್ನು ಸಾಕುವುದು ಹೆಚ್ಚು ತ್ರಾಸದಾಯಕವಾಗಿದ್ದರಿಂದ ಆತನನ್ನು ಹೇಗಾದರೂ ಮಠದಿಂದ ಹೊರಹಾಕಲು ಮಠದವರು ಹವಣಿಸುತ್ತಿದ್ದರು.

**5. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು?**

ಕೃಷ್ಣೇಗೌಡ ಆನೆಯನ್ನು ತಂದಾಗ ಆತನ ಕತೆ ಮುಗಿಯಿತೆಂದು ಊರಿನವರು ಭಾವಿಸುತ್ತಾರೆ. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ! ಮನೆ ಮಠ ಸಂಪೂರ್ಣ ಹಾಳುಮಾಡಿಕೊಂಡು ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಇದೆಂದು ಜನರು ದೃಢವಾಗಿ ನಂಬಿದ್ದರು.

**6. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?**

ಗೂಳೂರು ಮಠದಲ್ಲಿ ಬರಿ ಒಣಹುಲ್ಲು ಹಾಗೂ ಮೊಸರನ್ನು ತಿಂದು ಆನೆ ಸೊರಗಿತ್ತು. ಆದರೆ ಕೃಷ್ಣೇಗೌಡ ಆನೆಗೆ ಬಯನೆ ಸೊಪ್ಪು, ಹಸಿ ಹುಲ್ಲು, ಹಿಂಡಿ, ಬೆಲ್ಲ ಗೆಣಸು ಎಲ್ಲ ಕೊಟ್ಟು ಪಗಡುದಸ್ತಾಗಿ ಬೆಳೆಸಿದ.

**7. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?**

ಅಪ್ಪರ್ ಭದ್ರಾ ಅಣೆಕಟ್ಟಿನಿಂದ ಮುಳುಗಡೆಯಾಗುವ ಕಾಡುಗಳನ್ನು ಸರ್ವೇ ಮಾಡಲು ಬಂದಿದ್ದ ನಿರೂಪಕರ ಗೆಳೆಯ ಪ್ರಕಾಶ್ ಭಾಷಣ ಮಾಡುತ್ತಾ, ಅರಣ್ಯ ಇಲಾಖೆಯವರು ಕಾಡಿನ ಮರಗಳನ್ನು ತೆಗೆದು ನೀಲಗಿರಿ ಅಕೇಶೀಯಾ ಮುಂತಾದ ನಿರುಪಯುಕ್ತವಾದುವುಗಳನ್ನು ನೆಡುತ್ತಿದ್ದಾರೆ. ಇದರಿಂದ ಕಾಡಾನೆಗಳು ಊರಿನ ಕಡೆ ಬಂದು ಜನರ ಪೈರು ಫಸಲಿಗೆ ಹಾನಿ ಮಾಡುತ್ತಿವೆ ಎಂದು ಕಾಡಾನೆ ಹಾವಳಿಗೆ ಕಾರಣ ಕೊಡುತ್ತಾನೆ.

**8. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು?**

ಫಾರೆಸ್ಟರ್ ನಾಗರಾಜನ ಪ್ರಕಾರ ಪಿಡಬ್ಲ್ಯುಡಿನವರು, ಕರೆಂಟಿನವರು ಹಾಗೂ ಟೆಲಿಫೋನಿನವರು, ಈ ಮೂವರು ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳಾಗಿದ್ದಾರೆ.

**9. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?**

ದುರ್ಗಪ್ಪ ಹೇಳಿದ್ದನ್ನೆ ಮತ್ತೆಮತ್ತೆ ಹೇಳುವುದನ್ನು ನೋಡಿ ರೇಗಿದ ಫಾರೆಸ್ಟರ್ ನಾಗರಾಜ ಕೃಷ್ಣೇಗೌಡರ ಆನೆಯೇ ಮರದ ಕೊಂಬೆಯನ್ನು ಬಿಳಿಸಿದ್ದು ಎಂದು ಹೇಳಿಕೆ ಬರೆದುಕೊಡುತ್ತಿಯಾ? ಹಾಗಿದ್ರೆ ಹೇಳು. ಆಗ ಆನೆಯನ್ನು ಎಳೆದುಕೊಂಡು ಬಂದು ಅಲ್ಲಿರುವ ಅಂಬಾಸಿಡರ್ ಕಾರಿನ ಜೊತೆ ಕಟ್ಟಾಕಿ ಬರೆ ಹಾಕಿಬಿಡ್ತಿನಿ, ನಿನ್ನ ಪುಕಾರೇನಿದ್ರೂ ಬರವಣಿಗೇಲಿ ಇರಬೇಕು. ಹಂಗೀದ್ರೆ ಮಾತ್ರ ನಾನು ಆಕ್ಷನ್ ತೆಗೆದುಕೊಳ್ಳೋದು ಎಂದು ಗುಡುಗುತ್ತಾನೆ.

**10. ಡ್ರೈವರ್ ತಲೆ ಜಜ್ಜಿ ಹೋದದ್ದು ಹೇಗೆ? ಆನೆ ಅದಕ್ಕೆ ಕಾರಣವೆ?**

ಶಿವೇಗೌಡರ ಸಾಮಿಲ್ಲಿಗೆ ಕಳ್ಳನಾಟವನ್ನು ತಂದ ಲಾರಿಯ ಡ್ರೈವರ್ ಲಾರಿಯಲ್ಲಿಯೇ ಅರೆನಿದ್ರೆಯಲ್ಲಿದ್ದರೆ, ನಾಟಕ್ಕೆ ಕಟ್ಟಿದ್ದ ಹಗ್ಗವನ್ನು ಬಿಚ್ಚದೆ ಕ್ಲೀನರ್ ಚಹಾ ಕುಡಿಯಲು ಹೋಗಿರುತ್ತಾನೆ. ನಾಟವನ್ನು ಇಳಿಸಲು ಆನೆಯೊಂದಿಗೆ ಬಂದ ಮಾವುತನೂ ಕೂಡ ಹಗ್ಗವನ್ನು ಬಿಚ್ಚಲು ಮರೆತು ಆನೆಗೆ ನಾಟವನ್ನು ಉರುಳಿಸಲು ಹೇಳುತ್ತಾನೆ. ಆದರೆ ಇದಾವುದು ಅರಿಯದ ಆನೆಯು ಬಲಪ್ರಯೋಗಿಸಿ ನಾಟವನ್ನು ತಳ್ಳಿದಾಗ ನಾಟದೊಂದಿಗೆ ಲಾರಿಯೂ ಪಕ್ಕಕೆ ಉರುಳಿತು. ಆಗ ಅದರಲ್ಲಿ ಮಲಗಿದ್ದ ಡ್ರೈವರ್‌ನ ತಲೆಮೇಲೆ ಕ್ಯಾಬಿನ್‌ನಿಂದ ಮಣಭಾರದ ಜಾಕ್ ಬಿದ್ದು ಆತನ ತಲೆ ಜಜ್ಜಿ ಹೋಯಿತು. ಇದಕ್ಕೆ ಕ್ಲೀನರ್ ಹಾಗೂ ಮಾವುತನ ಬೇಜಬ್ದಾರಿಯೇ ಕಾರಣವಲ್ಲದೆ, ಇದಾವುದು ತಿಳಿಯದ ಆನೆ ಕಾರಣವಲ್ಲ.

**11. ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ದುರ್ಗಪ್ಪ ವಿವರಿಸಿದ್ದು ಹೇಗೆ?**

ದುರ್ಗಪ್ಪ ನಿರೂಪಕರನ್ನು ಕುರಿತು ನಾನು ಸಾಯೋದಕ್ಕೆ ಹೆದರೋನು ಅಂತ ತಿಳಿದುಕೊಂಡಿದ್ದೀರ? ಲೈನ್‌ಮನ್ ಕೆಲಸಕ್ಕೆ ಸೇರಿದ ಮೇಲೆ ಪ್ರಾಣದ ಆಸೆ ಇಟ್ಟುಕೊಂಡ



ಆಗುತ್ತ? ನಮ್ಮ ಡಿಪಾರ್ಟ್‌ಮೆಂಟಿನ ಲೈನ್‌ಮನ್‌ಗಳ್ಯಾರು ಈವರೆಗೆ ಸರ್ವಿಸ್ ಮುಗಿಸಿ ನಿವೃತ್ತಿಯಾಗಿರುವುದನ್ನು ನೋಡಿದ್ದೀರಾ? ಕರೆಂಟಿನ ಜೊತೆ ಕೆಲಸ ಮಾಡುವಾಗ ಒಂದಲ್ಲ ಒಂದು ದಿನ ಎಚ್ಚರ ತಪ್ಪಿದ್ರೂ ಅಲ್ಲಿಗೆ ನಮ್ಮ ಸರ್ವಿಸ್ ಮುಗಿದಂತೆ ಎಂದು ತನ್ನ ಕೆಲಸ ಜಗತ್ತಿನಲ್ಲೇ ಅತ್ಯಂತ ಅಪಾಯಕಾರಿ ಕೆಲಸ ಎಂದು ವಿವರಿಸುತ್ತಾನೆ.

**12. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?**

ಮೂರು ದಿನಗಳಿಂದ ಪೋಸ್ಟ್ ಕೊಟ್ಟಿಲ್ಲವೆಂದು ನಿರೂಪಕರು ಆಕ್ಷೇಪಿಸಿದರೆ ಜಬ್ಬಾರ್ ಅಯ್ಯೋ ಯಾವುದೊ ಮದುವೆ ಮನೆ ಕಾಗದ ಸಾರ್. ನೀವೇನು ಹೋಗೋದಿಲ್ಲ ಏನಿಲ್ಲ. ಅವನ್ನು ಇವತ್ತು ಕೊಟ್ಟರೂ ಒಂದೆ, ನಾಳೆ ಕೊಟ್ಟರೂ ಒಂದೆ ಎಂದು ಆಸಡ್ಡೆಯಿಂದ ಹೇಳುತ್ತಿದ್ದ.

**13. ನಾಯಿ ಕಚ್ಚಿದ್ದೆಲ್ಲಿ ಎಂದಾಗ ಜಬ್ಬಾರ್ ಇರುಸುಮುರುಸಿನಿಂದ ಏನು ಹೇಳಿದನು?**

ನಾಯಿ ಕಚ್ಚಿದ್ದೆಲ್ಲಿ ಎಂದು ನಿರೂಪಕರು ಕೇಳಿದಾಗ ಜಬ್ಬಾರ್ ಕೊಂಚ ಇರುಸುಮುರುಸಿನಿಂದ ಹೋಗಲಿ ಬಿಡಿ. ಅದು ಬೀದೀಲಿ ತೋರಿಸೋ ಹಂಗಿಲ್ಲ, ನನ್ಮಗಂದು ಅಂಥಾ ಜಾಗದಲ್ಲಿ ಕಚ್ಚಿದೆ. ಪ್ಯಾಂಟು ಬಿಚ್ಚಬೇಕಾಗುತ್ತೆ ಎಂದು ದನಿ ತಗ್ಗಿಸಿ ಹೇಳುತ್ತಾನೆ.

**14. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?**

ಹುಚ್ಚುನಾಯಿ ಹತ್ರ ಧೈರ್ಯದ ಪ್ರಶ್ನೇನೆ ಬರೋದಿಲ್ಲ. ಮೇಜು ಕುರ್ಚಿ ಕಾಲಿಗೆಲ್ಲಾ ಕಚ್ಚುತ್ತವೆ. ಅವಕ್ಕೆ ತಲೆಕೆಟ್ಟು ಕಂಡಕಂಡಿದ್ದಕ್ಕೆಲ್ಲಾ ಕಚ್ಚುತ್ತವೆಯಷ್ಟೆ ಎಂದು ಪುಟ್ಟಯ್ಯ ಹೇಳುತ್ತಾನೆ.

**15. ನಾಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?**

ಮುನಿಸಿಪಾಲಿಟಿ ಪ್ರೆಸಿಡೆಂಟರನ್ನು ಕುರಿತು ನಿರೂಪಕರು ನಿಮ್ಮ ನೌಕರರು ನಾಯಿಯನ್ನು ಕೊಲ್ಲದೆ ನಿಮಗೆ ಸುಳ್ಳು ಹೇಳುತ್ತಿದ್ದಾರೆ. ನೀವು ಒಂದು ಸಾರಿ ಪೇಟೆ ಬೀದಿಯಲ್ಲಿ ತಿರುಗಾಡಿದರೆ ನಿಮಗೇ ಗೊತ್ತಾಗುತ್ತದೆ. ಒಂದು ಕೆಲಸ ಮಾಡಿ ಇನ್ನು ಮೇಲೆ ನಾಯಿ ಕೊಂದರೆ ಬಾಲ ತಗೊಂಡು ಬಂದು ತೋರಿಸಬೇಕು ಅಂತ ಹೇಳಿ. ಆಗ ಅವರ ಲೆಕ್ಕ ಸುಳ್ಳೋ ನಿಜವೋ ಎಂದು ನಿಮಗೆ ಗೊತ್ತಾಗುತ್ತದೆ ಎಂದು ಸಲಹೆ ನೀಡುತ್ತಾರೆ.

**16. ಆನೆಯೇ ತಿಪ್ಪಣ್ಣನ ಸಾವಿಗೆ ಕಾರಣವೆಂದು ದುರ್ಗಪ್ಪ ಹೇಳಿದಾಗ ನಿರೂಪಕರ ಪ್ರತಿಕ್ರಿಯೆ ಏನು?**

ಆನೆಯೇ ತಿಪ್ಪಣ್ಣನ ಸಾವಿಗೆ ಕಾರಣವೆಂದು ದುರ್ಗಪ್ಪ ಹೇಳಿದಾಗ ನಿರೂಪಕರು "ಆತನಿಗೆ ಅದೇನ್ಮಾಡುತ್ತಯ್ಯಾ ಆನೆ, ಎಲ್ಲೋ ಕಂಬದ ಮೇಲೆ ಸತ್ತಿರೋ ತಿಪ್ಪಣ್ಣನಿಗೂ, ಎಲ್ಲೋ ಓಡಾಡಿಕೊಂಡಿರೋ ಆನೆಗೂ ಕಟ್ಟೇರಲ್ಲಯ್ಯ. ಬಾಯಿಲ್ಲದವರು ಈ ಪ್ರಪಂಚದಲ್ಲಿ

ಬದುಕೋಹಂಗೇ ಇಲ್ಲವೇನಯ್ಯ" ಎಂದು ಹೇಳುತ್ತಾರೆ.

**17. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?**

ಲೋಡು ಲಾರಿ ಓಡಿಸಿಕೊಂಡು ಬರುತ್ತಿದ್ದ ಡ್ರೈವರ್ ಅಬ್ಬಾಸ್‌ಗೆ ಬೀಡಿ ಎಳೆಯುವ ಬಯಕೆಯುಂಟಾಗುತ್ತದೆ. ಅದಕ್ಕಾಗಿ ಆತ ಸ್ಟೇರಿಂಗ್‌ನ್ನು ಕ್ಲೀನರ್ ಕೃಷ್ಣನ ಕೈಗೆ ಕೊಟ್ಟು ಬೀಡಿ ಎಳೆಯತೊಡಗುತ್ತಾನೆ. ಲಾರಿ ಒಂದು ದೊಡ್ಡ ಮರದ ಕಡೆ ನುಗ್ಗುವುದನ್ನು ನೋಡಿದ ಡ್ರೈವರ್ ಅಬ್ಬಾಸ್ ಲಾರಿಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದರೂ ಅದು ಸಾಧ್ಯವಾಗುವುದಿಲ್ಲ. ಇದರ ನಡುವೆ ಬ್ರೇಕ್ ಹಾಕಲು ಆತ ಮರೆತದ್ದರಿಂದ ಲಾರಿ ಮರಕ್ಕೆ ಢಿಕ್ಕಿ ಹೊಡೆದಾಗ ಹಿಂದೆಯಿದ್ದ ಅಪಾರ ತೂಕದ ದಿಮ್ಮಿಗಳು ಕ್ಯಾಬಿನ್ ಮುರಿದು ಮುಂದೆ ಬಂದಾಗ ಮರ ಹಾಗೂ ದಿಮ್ಮಿಗಳ ನಡುವೆ ಸಿಕ್ಕಿ ಹಾಕಿಕೊಂಡು ಇಬ್ಬರು ಸಾಯುತ್ತಾರೆ.

**18. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಆನೆ ಕಾರಣವಲ್ಲವೆಂದು ಕೃಷ್ಣೇಗೌಡರಿಗೆ ಏಕೆ ಹೇಳಲಾಗಲಿಲ್ಲ?**

ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರಿದ್ದ ಲಾರಿಯಲ್ಲಿ ಬರುವ ಕಳ್ಳಮಾಲನ್ನು ಶಿವೇಗೌಡರ ಸಾಮಿಲ್ಲಿನಲ್ಲಿ ಅನ್‌ಲೋಡು ಮಾಡಲು ಆನೆಯೊಂದಿಗೆ ವೇಲಾಯುಧ ಸಾಮಿಲ್ಲಿನಲ್ಲೇ ಕಾಯುತ್ತಿದ್ದ. ಆದ್ದರಿಂದ ಲಾರಿ ಅಪಘಾತವಾದಾಗ ಆ ಸ್ಥಳದಲ್ಲಿ ಆನೆಯೇ ಇರಲಿಲ್ಲ. ಆದರೆ ಈ ವಿಷಯವನ್ನು ಹೇಳಿದರೆ ತಮ್ಮ ಕಳ್ಳನಾಟದ ವ್ಯವಹಾರ ಬಯಲಾಗಬಹುದು ಎನ್ನುವ ಭಯದಿಂದಾಗಿ ಡ್ರೈವರ್

**19. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?**

ಆನೆಯ ಕಾಲಿನ ಉಗುರುಗಳ ಬಳಿ ಅಂಕುಶದಿಂದ ತಿವಿದರೆ ಅದಕ್ಕೆ ಪ್ರಾಣವೇ ಹೋಗುವಷ್ಟು ನೋವಾಗುತ್ತದೆಂದೂ, ಆ ಭಯಂಕರ ನೋವಿಗೆ ನಾಲ್ಕು ಸಾರಿ ತಿವಿಯುವುದರೊಳಗೆ ಎಂಥ ಪುಂಡು ಆನೆಯಾದರೂ ಶರಣಾಗಿ ನೆಲದ ಮೇಲೆ ಮಲಗಿಬಿಡುತ್ತದೆ ಎಂದು ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಕುರಿತು ವೇಲಾಯುಧನ ಅಪ್ಪ ಹೇಳಿರುತ್ತಾನೆ.

**20. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹಿರಾತು ನೀಡಿದರು?**

ಕೇವಲ ಕೋವಿ ಮಾತ್ರ ಸಿಕ್ಕಿ, ನಾಗರಾಜನ ಶವ ಸಿಗದಿದ್ದಾಗ ಅರಣ್ಯ ಇಲಾಖೆಯವರು ಪತ್ರಿಕೆಗಳಲ್ಲಿ ಅವನ ಫೋಟೋ ಕೊಟ್ಟು ಮನೆಯವರು, ಮೇಲಾಧಿಕಾರಿಗಳು ಹಾಗೂ ಊರಿನ ಜನರೆಲ್ಲಾ ನಿನ್ನದೇ ನಿರೀಕ್ಷೆಯಲ್ಲಿದ್ದಾರೆ. ನಿನ್ನ ವಿರುದ್ಧ ಯಾವುದೇ ಕ್ರಮ ಅಥವಾ ಷೋಕಾಸ್ ನೋಟೀಸ್ ಅಥವಾ ತನಿಖೆ ನಡೆಸುವುದಿಲ್ಲ. ಈ ಮನವಿಯನ್ನು ನೋಡಿದ ಕೂಡಲೇ ಎಲ್ಲಿದ್ದರು ಹಿಂದಿರುಗಿ ಬರತಕ್ಕದು ಎಂದೂ ಜಾಹೀರಾತನ್ನು ನೀಡಿದರು.



**ಈ. ನಾಲ್ಕು ಅಂಕಗಳ ಪ್ರಶ್ನೆಗಳು :**

**1. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.**

ಒಂದು ದಿನ ನಿರೂಪಕರು ತನ್ನ ಹಳೆಯ ಫೋರ್ಡ್ ಜೀಪಿನ ಅಡಿಯಲ್ಲಿ ಬಿದ್ದುಕೊಂಡು ಅದರ ಗೇರ್‌ಬಾಕ್ಸ್ ಬಿಚ್ಚಿ ರಿಪೇರಿ ಮಾಡುತ್ತಿದ್ದರು. ಜೀಪಿನ ಅಡಿಯಲ್ಲಿ ಮಲಗಿಕೊಂಡಿದ್ದ ನಿರೂಪಕರಿಗೆ ಎರಡು ಖಾಕಿ ಪ್ಯಾಂಟ್‌ಧಾರಿ ಕಾಲುಗಳು ಅವರತ್ತ ಬರುವುದು ಕಾಣುತ್ತದೆ. ಕಾಲಿನಲ್ಲಿ ಬೂಡ್ಸ್ ಇಲ್ಲದಿರುವುದರಿಂದ ಬಂದವರು ಪೊಲೀಸ್ ಇಲಾಖೆಯವರಲ್ಲ, ಬೇರೆ ಯಾವ ಇಲಾಖೆಯವರು ಅಂತ ಯೋಚಿಸುತ್ತಿರುವಾಗ ಬಂದಾತ ಕೆಮ್ಮುವ ಮೂಲಕ ನಿರೂಪಕರ ಗಮನಸೆಳೆಯಲು ಪ್ರಯತ್ನಿಸುತ್ತಾನೆ. ಬಂದಾತ ತಾನು ಲೈನ್‌ಮನ್ ಎಂದಾಗ ನಿರೂಪಕರು ಲೈನ್‌ಮನ್ ತಿಪ್ಪಣ್ಣನೇ? ಎಂದಾಗ ಬಂದಾತ ನಾನು ಕರೆಂಟು ಡಿಪಾರ್ಟ್‌ಮೆಂಟಿನವನು ಲೈನ್‌ಮನ್ ದುರ್ಗಪ್ಪ ಎಂದು ಹೇಳಿ ತನ್ನ ಇಲಾಖೆಗೆ ಟೆಲಿಫೋನ್ ಡಿಪಾರ್ಟ್‌ಮೆಂಟಿನ ಬಗ್ಗೆಯಿದ್ದ ಅಸಮಧಾನವನ್ನು ಹೊರಹಾಕುತ್ತಾನೆ. ನಿರೂಪಕರು ಆತ ಬಂದ ಕಾರಣವನ್ನು ವಿಚಾರಿಸಿದಾಗ ಕೃಷ್ಣೇಗೌಡರ ಆನೆ ಮರದ ಕೊಂಬೆಯನ್ನು ಕರೆಂಟು ತಂತಿಯ ಮೇಲೆ ಎಳೆದು ಹಾಕಿದ್ದು ಅದನ್ನು ತೆರವುಗೊಳಿಸಲು ಕೊಡಲಿ ಬೇಕಿತ್ತು ಎಂದು ಹೇಳುತ್ತಾನೆ. ಆದರೆ ಈ ಕೆಲಸ ಆನೆಯದು ಎಂದು ದುರ್ಗಪ್ಪ ಹೇಳಿದ ಮಾತಿಗೆ ನಿರೂಪಕರು ಸಂಶಯವನ್ನು ವ್ಯಕ್ತಪಡಿಸಿದಾಗ, ಆತ ಘಟನೆ ನಡೆದ ಸ್ಥಳದಲ್ಲಿ ಆನೆ ಲದ್ದಿ ಬಿದ್ದಿರುವುದರಿಂದ ಅದು ಆನೆಯ ಕೆಲಸವೆಂದು ಸಮರ್ಥನೆ ನೀಡುತ್ತಾನೆ. ನಂತರ ನಿರೂಪಕರ ಸೂಚನೆಯಂತೆ ಆತ ಅವರ ಮನೆಯ ಅಟ್ಟದಿಂದ ಕೊಡಲಿಯನ್ನು ತೆಗೆದುಕೊಂಡು ಹೋಗುತ್ತಾನೆ.

**2. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.**

ಕೊಂಬೆಯನ್ನು ತೆರವುಗೊಳಿಸಲು ನಿರೂಪಕರ ಮನೆಯಿಂದ ಕೊಡಲಿ ತೆಗೆದುಕೊಂಡು ಹೋದ ದುರ್ಗಪ್ಪ ಮೂರ್ನಾಲ್ಕು ದಿನವಾದರೂ ಹಿಂದಿರುಗಿಸುವುದಿಲ್ಲ. ಆದರೆ ಆ ಕೊಡಲಿಯಾದರೋ ಸುಳ್ಳು ಹೇಳಿ ಕದ್ದುಕೊಂಡು ಹೋಗಬೇಕಾದಷ್ಟು ಅಮೂಲ್ಯವಾದುದೇನೂ ಅಲ್ಲ. ಕೆರೆ ಕೆಲಸಕ್ಕೆಂದು ಬಂದಿದ್ದ ಮಣ್ಣು ಒಡ್ಡರು ಅಗೆಯುವಾಗ ಅಡ್ಡಾಗುವ ಬೇರುಗಳನ್ನು ಕಡಿಯಲೆಂದು ನಿರೂಪಕರ ಕೊಡಲಿಯನ್ನು ಹಿಡಿದುಕೊಂಡು ಕಲ್ಲುಮಣ್ಣು ನೋಡದೆ ಯರ್‍ರಾಬಿರ್‍ರಿ ಜಪ್ಪಿದ್ದರು. ಇದರಿಂದ ಹಿಂಭಾಗ ಯಾವುದು ಮುಂಭಾಗ ಯಾವುದು ಎಂದು ಗೊತ್ತಾಗದಷ್ಟು ಕೊಡಲಿ ಹಾಳಾಗಿತ್ತು. ಅದರ ಈಗಿನ ಸ್ಥಿತಿ ನೋಡಿದರೆ ಅದನ್ನು ಸುತ್ತಿಗೆ ಎಂದು ಕರೆಯಬಹುದಾಗಿತ್ತು. ಅದರಲ್ಲಿ ದುರ್ಗಪ್ಪ ಹೇಗೆ ಮರ ಕಡಿಯುತ್ತಾನೋ ಎಂದು ನಿರೂಪಕರಿಗೇ ಸಂಶಯ ಮೂಡುವಷ್ಟರ ಮಟ್ಟಿಗೆ ಅದು ಹಾಳಾಗಿತ್ತು. ಆದರೆ ಕೊಡಲಿಯನ್ನು ದುರ್ಗಪ್ಪನೆ ಸ್ವತಃ ಅಟ್ಟದ ಮೇಲಿನಿಂದ ಹುಡುಕಿ ತೆಗೆದುಕೊಂಡು ಹೋಗಿದ್ದರಿಂದ ಆತ ತನ್ನನ್ನು ದೂಷಿಸುವಂತೆ ಇರಲಿಲ್ಲ ಎಂಬ ಸಮಧಾನ ಲೇಖಕರಿಗಿತ್ತು. ಕೊಡಲಿಯ ಆ ಸ್ಥಿತಿಯಿಂದಾಗಿ ಅದನ್ನು ಅವನು ಕದ್ದರೂ ನಿರೂಪಕರಿಗೆ ಕೊಡಲಿ ಹೋಯ್ತೆಂದು ದುಃಖವಾಗುತ್ತಿರಲಿಲ್ಲ. ಈ ಕಾರಣದಿಂದಾಗಿ ಲೇಖಕರು ದುರ್ಗಪ್ಪನನ್ನು ಹುಡುಕಿ ಕೊಡಲಿ ವಸೂಲಿ ಮಾಡುವ ಗೋಜಿಗೆ ಹೋಗಲಿಲ್ಲ.

**3. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?**

ಕೃಷ್ಣೇಗೌಡರ ಆನೆ ಕಾಡಿನಿಂದ ಹಿಡಿದು ತಂದು ಪಳಗಿಸಿದ ಆನೆಯಾಗಿರಲಿಲ್ಲ. ಘಟ್ಟದ ಕೆಳಗಿದ್ದ ಗೂಳೂರು ಮಠದಲ್ಲಿದ್ದ ಆನೆಯ ಮರಿಯೇ ಕೃಷ್ಣೇಗೌಡರ ಆನೆ. ಅದು ಹುಟ್ಟಿದ್ದು ಬೆಳೆದದ್ದು ಎಲ್ಲ ಊರಿನ ಜನಗಳ ನಡುವೆಯೆ ಆಗಿತ್ತು. ಆದ್ದರಿಂದ ಕೃಷ್ಣೇಗೌಡರ ಆನೆಗೆ ಕಾಡು ಹಾಗೂ ಕಾಡಾನೆಗಳ ಬಗೆಯಾಗಲಿ ಏನೂ ತಿಳುವಳಿಕೆ ಇರಲಿಲ್ಲ.

ನಾಡಿನಲ್ಲೆ ಹುಟ್ಟಿ ನಾಡಿನಲ್ಲೆ ಬೆಳೆದಿರುವುದರಿಂದ ಕೃಷ್ಣೇಗೌಡರ ಆನೆ ಮೂಡಿಗೆರೆಯ ಪೇಟೆಗೆ ಒಗ್ಗಿಹೋಗಿತ್ತು. ಪೇಟೆಯಲ್ಲಿ ಯಾವ ಲಂಗುಲಗಾಮಿಲ್ಲದೆ ದನಕರುಗಳ ರೀತಿಯಲ್ಲಿ ತಿರುಗಿಕೊಂಡಿರುತ್ತಿತ್ತು. ಶಾಲೆಯ ಮಕ್ಕಳು ಆನೆಯ ಹತ್ತಿರ ಬರಲು ಹೆದರುತ್ತಿದ್ದರಾದರೂ, ಅವರು ದೂರದಿಂದಲೇ ಗೌರಿ ಎಂದು ಕೂಗಿದರೆ ಸೊಂಡಿಲೆತ್ತಿ ಸಲಾಂ ಮಾಡುತ್ತಿತ್ತು. ದಾರಿ ಬದಿಯ ಪೆಟ್ಟಿಗೆ ಅಂಗಡಿಯವರು ಹಣ್ಣು ಖಾಲಿಯಾದ ಬಳಿಕ ಉಳಿದ ಬಾಳೆಗೊನೆಗಳ ದಿಂಡು, ಸಿಪ್ಪೆಗಳನ್ನೂ, ಜಜ್ಜಿದ ಹಾಳಾದ ಹಣ್ಣುಗಳನ್ನೂ ಆನೆಗೆ ಕೊಡಲು ಇಟ್ಟಿರುತ್ತಿದ್ದರು. ಆನೆಯೂ ಖಾಯಮ್ಮಾಗಿ ಎಲ್ಲಾ ಪೆಟ್ಟಿಗೆ ಅಂಗಡಿಗಳ ಬಳಿಗೂ ಹೋಗಿ ಅವನ್ನೆಲ್ಲಾ ಸೊಂಡಿಲಲ್ಲಿ ತಗೊಂಡು ತಿನ್ನುತ್ತಿತ್ತು. ಈ ರೀತಿಯಾಗಿ ಪೇಟೆಯ ಜನರೊಂದಿಗೆ ಕೃಷ್ಣೇಗೌಡರ ಆನೆ ಉತ್ತಮ ಬಾಂಧವ್ಯವನ್ನು ಹೊಂದಿತ್ತು.

**4. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?**

ಮಠದ ಧರ್ಮಗುರುಗಳನ್ನು ಜನರು ಅಡ್ಡಪಲ್ಲಕಿಯಲ್ಲಿ ತಮ್ಮ ಹೆಗಲಮೇಲೇ ಹೊರತೊಡಗಿದ್ದರಿಂದ ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋಯ್ತು. ಇದರಿಂದಾಗಿ ಮಠದ ಪಾಲಿಗೆ ಆನೆ ನಿರುಪಯುಕ್ತ ಎಂದೆನಿಸಿಕೊಂಡಿತ್ತು. ಆದರೆ ಆನೆಗಿಂತಲೂ ಹೆಚ್ಚಾಗಿ ಅದರ ಮಾವುತ ವೇಲಾಯುಧ ಮಠಕ್ಕೆ ಸಮಸ್ಯೆಯಾಗಿದ್ದ.

ಇಪ್ಪತ್ತನಾಲ್ಕು ಗಂಟೆಯೂ ವೇಲಾಯುಧ ಕುಡಿದೇ ಇರುತ್ತಿದ್ದರಿಂದ ಆತ ಮಠದ ಸಾತ್ವಿಕ ವಾತಾವರಣಕ್ಕೆ ದೊಡ್ಡ ತಲೆ ನೋವಾಗಿದ್ದ. ತನ್ನ ದುರ್ನಡತೆಯಿಂದಾಗಿ ಆತನಿಗೆ ಒಮ್ಮೆ ಛೀಮಾರಿಯನ್ನು ಹಾಕಿ ಮಠದಿಂದ ಓಡಿಸಲಾಗಿತ್ತು. ಆದರೆ ಮಾವುತನಿಲ್ಲದೆ ಆನೆ ಅನೇಕ ದಿನಗಳವರೆಗೆ ಯಾರ ಮಾತನ್ನೂ ಕೇಳದೆ ಆಹಾರವನ್ನೆ ಸೇವಿಸಲಿಲ್ಲ. ನಂತರ ಆನೆಯ ಸಲುವಾಗಿ ಕೇರಳದವರೆಗೆ ವೇಲಾಯುಧನನ್ನು ಹುಡುಕಿಕೊಂಡು ಹೋಗಿ ಹಿಂದಕ್ಕೆ ಕರೆತರಲಾಗಿತ್ತು. ಇದರಿಂದ ಆನೆ ಇರುವವರೆಗೆ ತನ್ನ ಅನಿವಾರ್ಯತೆಯನ್ನು ಅರಿತುಕೊಂಡ ಆತ ಮಠಕ್ಕೆ ಮತ್ತಷ್ಟು ಕಿರುಕುಳವನ್ನು ನೀಡಲಾರಂಭಿಸಿದ. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕುವುದು ಹೆಚ್ಚು ತ್ರಾಸದಾಯಕವಾಗಿತ್ತು. ಹೀಗಾಗಿ ಆನೆ ಮತ್ತು ಮಾವುತ ವೇಲಾಯುಧನನ್ನು ಮಠದಿಂದ ಹೊರಹಾಕಲು ಮಠದವರು ಹವಣಿಸುತ್ತಿದ್ದರು.



**5. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೆಗೌಡ ಆನೆಯನ್ನು ಹೇಗೆ ಸಾಕಿದನು?**

ಕೃಷ್ಣೇಗೌಡ ಆನೆಯನ್ನು ತಂದಾಗ ಆತನ ಕತೆ ಮುಗಿಯಿತೆಂದು ಊರಿನವರು ಭಾವಿಸಿದ್ದರು. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ! ಮನೆ ಮಠ ಸಂಪೂರ್ಣ ಹಾಳುಮಾಡಿಕೊಂಡು ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಇದೆಂದು ಜನರು ದೃಢವಾಗಿ ನಂಬಿದ್ದರು. ಆದರೆ ಆಗಿದ್ದು ಮಾತ್ರ ತದ್ವಿರುದ್ಧ. ಗೂಳೂರು ಮಠದಲ್ಲಿ ಬರಿ ಒಣಹುಲ್ಲು ಹಾಗೂ ಮೊಸರನ್ನು ತಿಂದು ಆನೆ ಸೊರಗಿತ್ತು. ಆದರೆ ಕೃಷ್ಣೇಗೌಡ ಆನೆಯನ್ನು ಕೊಂಡುತಂದ ಬಳಿಕ ಅದಕ್ಕೆ ಬಯನೆ ಸೊಪ್ಪು, ಹಸಿ ಹುಲ್ಲು, ಹಿಂಡಿ, ಬೆಲ್ಲ ಗೆಣಸು ಎಲ್ಲ ಕೊಟ್ಟು ಪಗಡುದಸ್ತಾಗಿ ಬೆಳೆಸಿದ.

**6. ಕಾಡಾನೆಗಳ ಹಾವಳಿ ನಿರೂಪಕರ ಅನುಭವಕ್ಕೆ ಬಂದುದು ಹೇಗೆ?**

ಒಂದು ಬೇಸಿಗೆಯ ಸಂದರ್ಭ ನಾಲ್ಕು ಕಾಡಾನೆಗಳು ನಿರೂಪಕರ ತೋಟಕ್ಕೆ ಬರುತ್ತದೆ. ಆದರೆ ಕಾಡಾನೆಗಳು ಬಂದದ್ದು ಮೊದಲು ನಿರೂಪಕರಿಗೆ ಗೊತ್ತೆ ಆಗುವುದಿಲ್ಲ. ನಿರೂಪಕರು ಗುಡ್ಡದ ಮೇಲಿನ ಒರತೆಗೆ ನೀರ ಪೈಪು ಹಾಕಿದ್ದರು. ಆದರೆ ಮನೆ ನಲ್ಲಿಗೆ ಹಾಕಿದ್ದ ಪೈಪಿನಲ್ಲಿ ನೀರು ಬರುವುದು ನಿಂತು ಹೋದಾಗ ಪೈಪಿನಲ್ಲಿ ಕಪ್ಪೆಗಳೋ, ನೀರು ಹಾವುಗಳೋ ಸಿಕ್ಕಿ ಹಾಕಿಕೊಂಡಿರಬಹುದು ಎಂದು ಅವರು ಭಾವಿಸುತ್ತಾರೆ. ಅದೇ ಆಲೋಚನೆಯಿಂದ ಪೈಪಿನ ಉದ್ದಕ್ಕೂ ನೋಡುತ್ತಾ ಹೋಗುತ್ತಾರೆ. ಆದರೆ ಕೊಂಚ ದೂರ ಹೋಗುವುದರ ಒಳಗಾಗಿ ಪೈಪು ಇಡಲು ಮಾಡಿದ್ದ ದಾರಿಯಲ್ಲಿ ಗುಂಡಿ ಬಿದ್ದಿದ್ದವು. ಆ ಗುಂಡಿಯೊಳಗೆ ನೀರು ತುಂಬಿಕೊಂಡಿದ್ದು ಪೈಪುಗಳು ಪುಡಿಪುಡಿಯಾಗಿ ಅದರೊಳಗೆ ಹುದುಗಿಹೋಗಿರುವುದು ಅವರಿಗೆ ಕಾಣಿಸುತ್ತದೆ. ತೇವದ ನೆಲದಲ್ಲಿ ಆನೆಗಳು ಹೆಜ್ಜೆಯಿಟ್ಟರೆ ಸಣ್ಣಸಣ್ಣ ಬಾವಿಗಳೇ ನಿರ್ಮಾಣವಾಗುತ್ತದೆ ಎಂದಾಗಲಿ, ಪೈಪುಗಳು ಪುಡಿಪುಡಿಯಾಗಿ ಪಾತಾಳದವರೆಗೆ ಹುದುಗಿ ಹೋಗುತ್ತವೆಂದಾಗಲಿ ನಿರೂಪಕರಿಗೆ ಆವರೆಗೆ ಅಂದಾಜಿರಲಿಲ್ಲ. ಊರಿನವರು ಎಲ್ಲರು ಆನೆಯ ಕಾಟ ಎಂದು ಕೂಗಾಡಲು ಆರಂಭಿಸಿದಾಗ ಇದು ಆನೆಗಳಿಂದಾದುದು ಎಂದು ತಿಳಿದ ನಿರೂಪಕರಿಗೆ ಮೊದಲ ಬಾರಿಗೆ ಕಾಡಾನೆಗಳ ಹಾವಳಿಯ ಅನುಭವವಾಗುತ್ತದೆ.

**7. ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ?**

ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ಕುರಿತು ಫಾರೆಸ್ಟರ್ ನಾಗರಾಜ ಪಿಡಬ್ಲ್ಯುಡಿನವರು, ಕರೆಂಟಿನವರು ಹಾಗೂ ಟೆಲಿಫೋನಿನವರು, ಈ ಮೂವರು ಫಾರೆಸ್ಟ್ ಡಿಪಾರ್ಟ್‌ಮೆಂಟಿನ ನಂಬರ್ ಒನ್ ಎನಿಮಿಗಳಾಗಿದ್ದಾರೆ. ಇವರಿಗೆ ಬುದ್ಧಿಕಲಿಸಬೇಕು. ಪಿಡಬ್ಲ್ಯುಡಿನವರು ರಸ್ತೆಗೆ ಟಾರು ಹಾಕಲು ನಮ್ಮ ರಸ್ತೆಬದಿಯ ಮರಾನೆಲ್ಲ ಕಡಿದು ಟಾರು ಕಾಯಿಸಿಕೊಳ್ಳುತ್ತಾರೆ. ಕರೆಂಟಿನವರು ಹಾಗೂ ಟೆಲಿಫೋನಿನವರು ಅವರ ಲೈನು ಎಳೆಯೋದಕ್ಕೆ ಫಾರೆಸ್ಟ್ ಕ್ಲಿಯರ್ ಮಾಡ್ತೀವಿ ಅಂತ ಎಲ್ಲೆಂದರಲ್ಲಿ ಸಾವಿರಾರು ಎಕರೆ ಕಾಡುಕಡಿದು ಹಾಳು ಮಾಡ್ತಿದ್ದಾರೆ. ಈಗ

ಹಳ್ಳಿಹಳ್ಳಿಗೆ ಕರೆಂಟು ಹಾಗೂ ಟೆಲಿಫೋನ್ ಸಂಪರ್ಕ ಕೊಡಬೇಕೆಂದು ಸರ್ಕಾರ ನಿಯಮ ಮಾಡಿರುವುದರಿಂದ ಇವರ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಿದೆ. ಲೈನ್ ಕ್ಲಿಯರ್ ಮಾಡೋ ನೆವದಲ್ಲಿ ಇವರು ಯಾರೂ ಮನೆಗೆ ಸೌದೆ ಕೊಳ್ಳುತ್ತಲೆ ಇಲ್ಲಾ. ಪಿಡಬ್ಲ್ಯುಡಿನವರು, ಕರೆಂಟಿನವರು ಹಾಗೂ ಟೆಲಿಫೋನಿನವರು ಕೂಡ ಸರ್ಕಾರದೇ ಡಿಪಾರ್ಟ್‌ಮೆಂಟಾದರೂ ಇವರನ್ನು ಬಾಲ ಬಿಚ್ಚೋದಕ್ಕೆ ಬಿಟ್ಟರೆ ಫಾರೆಸ್ಟ್ ಡಿಪಾರ್ಟ್‌ಮೆಂಟು ಬಾಗಿಲು ಮುಚ್ಚಬೇಕಾಗುತ್ತದೆ ಎಂದು ನಿರೂಪಕರಿಗೆ ಹೇಳುತ್ತಾನೆ.

**8. ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ.**

ಒಂದು ರಾತ್ರಿ ಶಿವೇಗೌಡರ ಸಾಮಿಲ್ಲಿಗೆ ಕಳ್ಳನಾಟದ ಲೋಡುಲಾರಿ ಬಂದಿರುತ್ತದೆ. ಕ್ಲೀನರ್ ನಾಯರ್ ನಾಟಾಕ್ಕೆ ಕಟ್ಟಿದ್ದ ಹಗ್ಗವನ್ನು ಬಿಚ್ಚದೆ ಹೋಟೆಲಿನಲ್ಲಿ ಚಾ ಕುಡಿದು ಬರಲು ಹೋಗುತ್ತಾನೆ. ಡ್ರೈವರ್ ಒಬ್ಬನೆ ನಿದ್ರೆ ಮಂಪರಿನಲ್ಲಿ ತೂಕಡಿಸುತ್ತ ಸ್ಟಿಯರಿಂಗ್ ಚಕ್ರದ ಮೇಲೆ ತಲೆ ವಾಲಿಸಿಕೊಂಡು ಅರೆನಿದ್ರೆ ಮಾಡುತ್ತಿರುತ್ತಾನೆ. ಆ ವೇಳೆಗೆ ತಮ್ಮ ಪಾಲಿನ ಕೋಟದ ಷರಾಬು ಕುಡಿದಿದ್ದ ಆನೆ ಹಾಗೂ ಮಾವುತ ವೇಲಾಯುಧ ಕಳ್ಳನಾಟವನ್ನು ಇಳಿಸಲು ಅಲ್ಲಿಗೆ ಬರುತ್ತಾರೆ. ಷರಾಬಿನ ನಿಷಾದಲ್ಲಿದ್ದ ವೇಲಾಯುಧನಿಗೂ ಲಾರಿಗೂ ನಾಟಾಗಳಿಗೂ ಹಗ್ಗ ಬಿಗಿದು ಕಟ್ಟಿದ್ದು ಬಿಚ್ಚಬೇಕೆಂದು ಮರೆತೇಹೋಗಿರುತ್ತದೆ. ವೇಲಾಯುಧ ಹಿಂದುಮುಂದು ನೋಡದೆ ಆತ ಆನೆಗೆ ಲಾರಿ ಮೇಲಿನ ದಿಮ್ಮಿಗಳನ್ನು ತಳ್ಳಿ ಉರುಳಿಸಲು ಸೂಚಿಸುತ್ತಾನೆ. ಲಾರಿಗೆ ನಾಟವನ್ನು ಬಿಗಿದು ಕಟ್ಟಿದ್ದರಿಂದ ನಾಟ ಮಾತ್ರ ಉರುಳದೆ ಲಾರಿ ಸಮೇತ ಮೆಲ್ಲನೆ ವಾಲಿಕೊಂಡು ಒಂದು ಕಡೆಗೆ ಧೊಪ್ಪನೆ ಉರುಳಿ ಬಿತ್ತು. ನಿದ್ರೆಯ ಮಂಪರಿನಲ್ಲಿದ್ದ ಡ್ರೈವರಿಗೆ ಎಚ್ಚರಾದಾಗ ಪ್ರಪಂಚ ಯಾಕೋ ತಲೆಕೆಳಗಾಗುತ್ತಿದೆ ಎನಿಸಿತು. ಲಾರಿ ನಿಧಾನವಾಗಿ ವಾಲುತ್ತ ಉರುಳಿದ್ದರಿಂದ ಡ್ರೈವರ್‌ಗೆ ಹೆಚ್ಚಿನ ಅನಾಹುತವಾಗುತ್ತಿರಲಿಲ್ಲ. ಆದರೆ ಕ್ಯಾಬಿನಿನ್ನಲ್ಲಿ ಇಟ್ಟಿದ್ದ ಮಣಭಾರದ ಲಾರಿ ಜಾಕ್ ಧೊಪ್ಪನೆ ಅವನ ಬುರುಡೆಯ ಮೇಲೆ ಬಿದ್ದ ಹೊಡೆತಕ್ಕೆ ಅವನ ತಲೆ ಜಜ್ಜಿ ಕಮಕ್‌ಕಿಮಕ್ ಎನ್ನದೆ ಪರಂಧಾಮಕ್ಕೆ ಹೋದ.

**9. ಡ್ರೈವರ್ ಸಾವಿನ ಸುದ್ದಿಯನ್ನು ಶಿವೇಗೌಡ ಮತ್ತಿತರು ಹೇಗೆ ಮುಚ್ಚಿ ಹಾಕಿದರು?**

ಡ್ರೈವರ್ ಸಾವಿನ ಸುದ್ದಿಯನ್ನು ತಿಳಿದ ಸಾಮಿಲ್ಲಿನ ಮಾಲೀಕ ಶಿವೇಗೌಡನಿಗೆ ಕಳ್ಳನಾಟದ ದಂಧೆ ಎಲ್ಲರಿಗೂ ತಿಳಿದು ತಾನು ಸಮಸ್ಯೆ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ ಎಂದು ಗಾಬರಿಯಾಗುತ್ತದೆ. ಇದರಿಂದಾಗಿ ಶಿವೇಗೌಡ ಮತ್ತಿತರರು ಸೇರಿಕೊಂಡು ಡ್ರೈವರನ ಸಾವಿನ ವಿಚಾರವನ್ನು ಯಾರಿಗೂ ತಿಳಿಸುವುದಿಲ್ಲ. ಬೆಳಗಾದಾಗ ಲಾರಿ ಸರಿಯಾಗಿ ನಿಂತಿರುತ್ತದೆ. ಡ್ರೈವರ್‌ನ ಸಾವಿನ ವಾರ್ತೆ ಪಿಸುಮಾತಿನಲ್ಲೇ ಮುಕ್ತಾಯವಾದ್ದರಿಂದ ಶಿವೇಗೌಡ ಹಾಗೂ ಕೃಷ್ಣೇಗೌಡ ಇಬ್ಬರು ಸೇರಿ ಪ್ರಕರಣವನ್ನು ಮುಚ್ಚಿಹಾಕುತ್ತಾರೆ. ಯಾರೂ ದೂರು ಕೊಡದ ಕಾರಣ ಕಾನೂನಿನ ಕ್ರಮ ಯಾರ ಮೇಲೂ ಜಾರಿಯಾಗಲಿಲ್ಲ. ಲಾರಿ ಟ್ರಿಪ್ಪಿಗೆ ಹೋದ ದಿಕ್ಕಿನಲ್ಲೆಲ್ಲ ಆ ಡ್ರೈವರಿಗೆ ಒಂದೊಂದು ಸಂಸಾರವಿದ್ದಿದ್ದರಿಂದ ಆ ಹದಿನೇಳು ಜನರಲ್ಲಿ ಯಾರು ಅಧಿಕೃತ, ಯಾರು ಅನಧಿಕೃತ



ಎಂದು ನಿರ್ಧರಿಸಲಾಗದೆ ಕ್ಲೀನರ್ ಯಾರಿಗೂ ವಿಷಯ ತಿಳಿಸುವುದಿಲ್ಲ. ಜೊತೆಗೆ ಡ್ರೈವರ್‌ನ ಹೆಣವನ್ನು ಮರದ ಹೊಟ್ಟಿನೊಳಗೆ ಹಾಕಿ ಆಗಾಗ ಬೆಂಕಿ ಕೊಡುವಂತೆ ಬೆಂಕಿ ಕೊಟ್ಟು ಬೂದಿ ಮಾಡಿದರು. ಈ ರೀತಿಯಾಗಿ ಡ್ರೈವರ್ ಸಾವಿನ ಸುದ್ದಿಯನ್ನು ಶಿವೇಗೌಡ ಮತ್ತಿತರು ಮುಚ್ಚಿ ಹಾಕಿದರು.

**10. ದುರ್ಗಪ್ಪನಿಗೆ ಲೈನ್‌ಮನ್ ಕೆಲಸ ರೋಸಿ ಹೋಗಲು ಕಾರಣಗಳೇನು?**

ದುರ್ಗಪ್ಪನಿಗೆ ಶಿವೇಗೌಡರ ಸಾಮಿಲ್ಲಿನ ಎದುರು ಹೋಗಿದ್ದ ಕಳಸ ಲೈನು ನೋಡಿಕೊಳ್ಳಲು ಕೊಟ್ಟಿದ್ದರು. ಈ ವಿದ್ಯುತ್ ಲೈನು ಇಡೀ ಮೂಡಿಗೆರೆಯಲ್ಲೆ ತರಲೆ ಲೈನು ಎಂದು ಹೆಸರುವಾಸಿಯಾಗಿತ್ತು. ಒಂದು ಕಡೆ ಹಳೇಕೋಟೆ, ಗೌಡಳ್ಳಿ, ಭೈರಾಪುರದವರೆಗೆ, ಇನ್ನೊಂದು ಕಡೆ ಬಣಕಲ್ಲು, ನಿಡುವಾಳೆ, ಜಾವಳಿವರೆಗೆ, ಎಲ್ಲೆಲ್ಲೋ ಕಗ್ಗಾಡಿನ ನಡುವೆ ಎಲ್ಲಾ ನುಗ್ಗಿನುಸುಳಿ ಹೋಗಿತ್ತು. ಇಂಥ ಸಮಸ್ಯೆಯ ಲೈನಿನ ಯೋಗಕ್ಷೇಮ ನೋಡಿಕೊಳ್ಳಲು ಹೋಗಿ ದುರ್ಗಪ್ಪನಿಗೆ ಬದುಕಿನ ಆಸೆಯೇ ಬತ್ತಿಹೋಗಿತ್ತು. ಕಾಡಿನಲ್ಲಿ ಯಾವ ಮೂಲೆಯಲ್ಲಿ ಕೊಂಬೆ ಮುರಿದು ಬೀಳಲಿ, ಎಲ್ಲಿ ಲೈನಿಗೆ ಬಾವಲಿಗಳು ಸಿಕ್ಕಿಕೊಳ್ಳಲಿ ಇಡೀ ಲೈನು ಕಟ್ಟಾಗುತ್ತಿತ್ತು. ಇದರಿಂದಾಗಿ ದುರ್ಗಪ್ಪ ಬೆಳಿಗ್ಗೆ ಎದ್ದು ತಂತಿ ಸುರುಳಿ ಕಟಿಂಗ್‌ಪ್ಲೆಯರ್ರ್ ಹಿಡಿದು ಎಲ್ಲಿ ಟ್ರಬಲ್ ಇದೆ ಎಂದು ಹುಡುಕಿ ಹೊರಡುತ್ತಿದ್ದ. ಕೊಂಬೆ ಕಡಿದರೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ದುರ್ಗಪ್ಪ ಸೌದೆ ಮಾಡುತ್ತಾನೆ ಎಂದು, ಕೊಂಬೆ ಕಡಿಯದಿದ್ದರೆ ಆತನ ಡಿಪಾರ್ಟ್‌ಮೆಂಟಿನವರು ಲೈನ್ ಸರಿಯಾಗಿ ಮೇಂಟೇನ್ ಮಾಡುತ್ತಿಲ್ಲ ಎಂದು ಬಯ್ಯುತ್ತಿದ್ದರು. ಈ ಕಾರಣಗಳಿಂದಾಗಿ ದುರ್ಗಪ್ಪನಿಗೆ ಲೈನ್‌ಮನ್ ಕೆಲಸ ರೋಸಿ ಹೋಗಿತ್ತು.

**11. ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?**

ಪೋಸ್ಟ್‌ಮನ್ ಜಬ್ಬಾರ್ ಹೆಸರಿಗೆ ಮಾತ್ರ ಕೇಂದ್ರ ಸರ್ಕಾರದ ನೌಕರ. ಹದಿನಾರು ವರ್ಷದಿಂದ ಆ ಇಲಾಖೆಯಲ್ಲಿ ಆತ ಕೆಲಸ ಮಾಡುತ್ತಿದ್ದರೂ ಇನ್ನೂ 'ಟೆಂಪರ್ವರಿ'ಯಾಗೆ ಇದ್ದುದರಿಂದ ಆತನ ಸಂಬಳ ಅವರತ್ತು ರೂಪಾಯಿ ಮಾತ್ರವಾಗಿತ್ತು. ಸಿಗುತ್ತಿದ್ದ ಈ ಅಲ್ಪ ಸಂಬಳದಿಂದ ಹೊಟ್ಟೆಹೊರೆಯಲು ಸಾಧ್ಯವಿಲ್ಲದೆ  ಆತ ನೂರೆಂಟು ಪತ್ರಿಕೆಗಳ ಏಜೆನ್ಸಿ ತಗೊಂಡು ಪೋಸ್ಟ್ ಕೊಡುವಲ್ಲೆಲ್ಲಾ ಚಂದಾದಾರರನ್ನು ಮಾಡಲು ಪ್ರಯತ್ನಿಸುತ್ತಿದ್ದ. ಇದರಿಂದಾಗಿ ಆತ ಪೋಸ್ಟ್‌ನ ಜೊತೆಗೆ ಮ್ಯಾಗಝೀನುಗಳ ಕಂತೆಯನ್ನು ಹೊತ್ತುಕೊಂಡು ತಿರುಗಬೇಕಿತ್ತು. ಪ್ರತಿನಿತ್ಯ ಆತ 18 ಕಿ.ಮೀ ಹೋಗಿಬರಬೇಕಿತ್ತು. ಮೂಡಿಗೆರೆಯಂತಹ ಕುಗ್ರಾಮ ಆಧುನೀಕರಣಗೊಳ್ಳುತ್ತಿದ್ದಂತೆ ಪೋಸ್ಟಲ್ ಡಿಪಾರ್ಟ್‌ಮೆಂಟಿನವರು ತಮ್ಮ ಸೇವೆಯನ್ನು ವಿಸ್ತರಿಸುತ್ತ ಹೋದರು. ಹ್ಯಾಂಡ್‌ಪೋಸ್ಟ್ ಬಿದಿರಳ್ಳಿ ಮುಂತಾದ ಕಡೆಗಳಲ್ಲಿ ಒಂದೊಂದು ಕೆಂಪು ಪೋಸ್ಟ್‌ಬಾಕ್ಸ್‌ಗಳನ್ನು ನೇತುಹಾಕಿದರು. ಇದರಿಂದಾಗಿ ಪೋಸ್ಟ್‌ಬಾಕ್ಸ್ ಇರುವ ಕಡೆಗೆಲ್ಲ ಜಬ್ಬಾರ್ ನಿತ್ಯ ಹೋಗಿ ಪೋಸ್ಟ್ ಸಂಗ್ರಹಿಸಿ ಹೆಡ್ಡಾಫಿಸಿಗೆ ಕೊಡಬೇಕಾಗಿರುವುದರಿಂದ ಆತನ ಸಮಸ್ಯೆ ಮತ್ತಷ್ಟು ಹೆಚ್ಚಾಯಿತು. ಅಷ್ಟು ದೂರವನ್ನು ನಡೆದಾಗಲಿ, ಸೈಕಲ್ಲಿನಲ್ಲಾಗಲಿ ತಿರುಗಲಾರದೆ ಆತ ಸೋತು ಹೋಗುತ್ತಾನೆ. ಪೋಸ್ಟ್ ಕೊಡಲು ಹೋದಾಗ ಯಾವುದಾದರೂ

ನಾಯಿ ವರ್ಷಕೊಮ್ಮೆಯಾದರೂ ಆತನಿಗೆ ಕಚ್ಚೇಕಚ್ಚುತ್ತಿತ್ತು. ಇದರಿಂದಾಗಿ ಪ್ರತಿ ವರ್ಷವೂ ಹದಿನಾಲ್ಕು ಇಂಜೆಕ್ಷನ್ ಹೊಟ್ಟೆಗೆ ಚುಚ್ಚಿಸ್ಕೊಳ್ತಿದ್ದ. ಈ ಎಲ್ಲಾ ಕಾರಣದಿಂದಾಗಿ ಆತ ತನ್ನ ಉದ್ಯೋಗದಿಂದಾಗಿ ಬವಣೆ ಅನುಭವಿಸುತ್ತಿದ್ದ.

**12. ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸುತ್ತಾನೆ?**

ವೆಟರ್ನರಿ ಸ್ಟಾಕ್‌ಮನ್ ಆಗಿರುವ ಪುಟ್ಟಯ್ಯ ನಿರೂಪಕರನ್ನು ಕುರಿತು, ಆಸ್ಪತ್ರೆಯಲ್ಲಿ ಹುಚ್ಚುನಾಯಿ ಇಂಜೆಕ್ಷನ್ ಇದೆಯಾದರೂ ಅದಕ್ಕೆ ಗ್ಯಾರಂಟಿಯಿಲ್ಲ. ಇರುವ ಇಂಜೆಕ್ಷನ್‌ಅನ್ನು ದನಎಮ್ಮೆಗಾದರೆ ರಿಸ್ಕ್ ತೆಗೆದುಕೊಂಡು ಚುಚ್ಚಬಹುದು. ಆದರೆ ಮನುಷ್ಯರ ವಿಷಯಕ್ಕೆ ಬಂದರೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಕಳೆದ ಒಂದು ವಾರದಿಂದ ಆಸ್ಪತ್ರೆಯಲ್ಲಿ ಕರೆಂಟ್ ಇಲ್ಲ. ಇದರಿಂದಾಗಿ ರೆಫ್ರಿಜರೇಟರ್ ಒಳಗಿರುವ ಸಾವಿರಾರು ರೂಪಾಯಿ ಔಷಧಿ ಕೆಟ್ಟುಹೋಗುತ್ತದೆ. ಇದರಿಂದ ಸಾಕಷ್ಟು ನಷ್ಟವಾದರೂ ವಿದ್ಯುತ್ ಇಲಾಖೆಯವರು ಈ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ತನ್ನಂಥವರ ಮಾತಿಗೆ ಅವರು ಬಿಲ್‌ಕುಲ್ ಬಗ್ಗೋದಿಲ್ಲ. ಇವತ್ತು ಹುಚ್ಚುನಾಯಿ ಕಚ್ಚಿದೆ ಅಂತ ಸುಮಾರು ದನಗಳು ಆಸ್ಪತ್ರೆಗೆ ಬಂದಿದ್ದವು. ರೆಫ್ರಿಜರೇಟರ್ ಕೆಲಸ ಮಾಡುತ್ತಿಲ್ಲ, ಸಿರಂ ಕೆಟ್ಟೋಗಿರೊದರಿಂದ ಅವುಗಳಿಗೆ ಚಿಕಿತ್ಸೆ ನೀಡದೇ ಹಿಂದಕ್ಕೆ ಕಳುಹಿಸಲಾಯಿತು. ಹೊಸ ಸಿರಂ ಕಳಿಸೋದಕ್ಕೆ ಕೂನೂರಿಗೆ ಇಂಡೆಂಟ್ ಹಾಕಿದ್ದೇನೆ. ಆದರೆ ಯಾವಾಗ ಕನ್‌ಸೈನ್‌ಮೆಂಟ್ ಕಳುಹಿಸುತ್ತಾರೆ ನೋಡಬೇಕೆಂದು ತನ್ನ ಅಸಹಾಯಕತೆಯನ್ನು ಆತ ವ್ಯಕ್ತಪಡಿಸುತ್ತಾನೆ.

**13. ಬೀದಿನಾಯಿಗಳ ನಿವಾರಣೆಗೆ ಖಾನ್ ಸಾಹೇಬರು ತೆಗೆದುಕೊಂಡಿದ್ದ ಕ್ರಮಗಳಾವುವು?**

ಖಾನ್ ಸಾಹೇಬರು ನಿರೂಪಕರನ್ನು ಕುರಿತು ಬೀದಿನಾಯಿಗಳನ್ನು ಎರಾಡಿಕೇಟ್ ಮಾಡೊದಕ್ಕೆ ಮುನ್ಸಿಪಾಲಿಟಿ ವತಿಯಿಂದ ಕೈಲಾದದ್ದನೆಲ್ಲ ಮಾಡಿದ್ದೇನೆ. ಶೂಟ್ ಮಾಡಿಸಿದ್ದೇನೆ. ಪಾಯ್ಸನ್ ತರಿಸಿ ಹಾಕಿದ್ದೇನೆ. ಒಬ್ಬ ಮುನಿಸಿಪಲ್ ಪ್ರೆಸಿಡೆಂಟ್ ಆಗಿ ನಾನು ಏನೇನು ಮಾಡಬೇಕೋ ಆ ಎಲ್ಲ ಕೆಲಸವನ್ನು ಮಾಡಿದ್ದೇನೆ. ಆದರೆ ಈ ಬಾರಿ ನಾವು ತರಿಸಿದ ಡಾಗ್ ಪಾಯ್ಸನ್ ಅಷ್ಟೊಂದು ಪರಿಣಾಮಕಾರಿಯಾಗಿ ಕಾಣಲಿಲ್ಲ. ಬಹುಶಃ ಕಲಬೆರಕೆಯಾಗಿರಬಹುದು. ಆದರೂ ಈ ವರ್ಷ ಇನ್ನೂರು ಮುನ್ನೂರು ನಾಯಿಗಳನಾದರೂ ಸಾಯಿಸಲಾಗಿದೆ. ಆದರೆ ಇಲ್ಲಿರುವ ನಾಯಿಗಳು ಮೂಡಿಗೆರೆಯ ಹೊರಗಿನಿಂದ ಎಕ್ಸ್‌ಪೋರ್ಟ್ ಆದವು. ಹೊರಗಡೆಯಿಂದ ಇಲ್ಲಿಗೆ ನಾಯಿಗಳನ್ನು ತುಂಬಿಕೊಂಡು ರಾತ್ರೋರಾತ್ರಿ ತಂದು ಬಿಡಲಾಗುತ್ತಿದ್ದೆ. ಆದರೆ ಇದು ಬಹಳ ಸೂಕ್ಷ್ಮ ವಿಷಯವಾಗಿರುವುದರಿಂದ ಈ ಬಗ್ಗೆ ಏನು ಮಾಡುವಂತಿಲ್ಲ ಎಂದು ಹೇಳುತ್ತಾರೆ.

**14. ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.**

ಒಂದು ದಿನ ಬೆಳಿಗ್ಗೆ ಲೈನ್‌ಮನ್ ತಿಪ್ಪಣ್ಣ ಟೆಲಿಫೋನ್ ಎಕ್ಸ್‌ಛೇಂಜ್ ಬಳಿಗೆ ಬಂದಾಗ ನುಗ್ಗೇಹಳ್ಳಿ ಕಡೆಯ ಎಲ್ಲ ಲೈನುಗಳು ಡೆಡ್ಡಾಗಿವೆ ಎಂದು ಮೇಟೆನೆನ್ಸ್‌ನವರು ಹೇಳುತ್ತಾರೆ. ಸಮಸ್ಯೆ ಬಗೆಹರಿಸಲು ತಿಪ್ಪಣ್ಣ ಹೊರಡುತ್ತಾನೆ. ಹೀಗೆ ಲೈನನ್ನು ಸರಿಪಡಿಸಲು



ಹೋದ ತಿಪ್ಪಣ್ಣ ಊರಿನಿಂದ ಸಾಕಷ್ಟು ದೂರದಲ್ಲಿರುವ ಹದಿನೇಳನೇ ಕಂಬದಲ್ಲಿನ ಜಂಕ್ಷನ್ ಬಾಕ್ಸ್ ಪರಿಶೀಲನೆ ಮಾಡಿದರೆ ಯಾವ ಯಾವ ಲೈನುಗಳು ಡೆಡ್ಡಾಗಿದೆ ಎಂದು ತಿಳಿಯುತ್ತದೆ ಎಂದು ಆ ಕಂಬವನ್ನು ಹತ್ತುತ್ತಾನೆ. ಆ ಕಂಬದ ಮೂಲಕ ಹಾದುಹೋಗಿರುವ ನಲವತ್ತು ತಂತಿಗಳ ತೊಡಕಿನೊಳಗೆ ನುಸುಳಿದ ತಿಪ್ಪಣ್ಣ ಜಂಕ್ಷನ್ ಬಾಕ್ಸ್ ಬಿಚ್ಚಿ ಸ್ಕ್ರೂಡ್ರೈವರಿನಲ್ಲಿ ಎಂಥದನ್ನೊ ಮೀಟುತ್ತಿರುವಾಗ ಇದ್ದಕ್ಕಿದ್ದಂತೆ ಅಲ್ಲೆ ಸತ್ತುಹೋಗುತ್ತಾನೆ. ಅನೇಕ ತಂತಿಗಳ ಗೋಜಲಿನೊಳಗೆ ಸಿಕ್ಕಿಕೊಂಡಿದ್ದ ತಿಪ್ಪಣ್ಣನ ಹೆಣ ರಿಪೇರಿ ಮಾಡುವ ಭಂಗಿಯಲ್ಲೇ ಕುಳಿತುಕೊಂಡಿದ್ದರಿಂದ ಆತ ಸತ್ತಹಾಗೇ ಕಾಣುತ್ತಿರಲಿಲ್ಲ. ನೋಡಿದವರೆಲ್ಲಾ ಏನೋ ಕಂಬ ಹತ್ತಿ ರಿಪೇರಿ ಮಾಡುತ್ತಿದ್ದಾನೆಂದು ತಿಳಿದು ಅಲಕ್ಷಿಸಿ ತಮ್ಮ ಪಾಡಿಗೆ ಹೋಗುತ್ತಿದ್ದರು.

**15. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೆ ವಿವರಿಸಿ?**

ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವಲ್ಲ ಎಂದು ನಿಸ್ಸಂದೇಹವಾಗಿ ಹೇಳಬಹುದು. ಲೋಡು ಲಾರಿ ಓಡಿಸಿಕೊಂಡು ಬರುತ್ತಿದ್ದ ಡ್ರೈವರ್ ಅಬ್ಬಾಸ್‌ಗೆ ಬೀಡಿ ಎಳೆಯುವ ಬಯಕೆಯುಂಟಾಗಿ ಆತ ಸ್ಟೇರಿಂಗ್‌ನ್ನು ಕ್ಲೀನರ್ ಕೃಷ್ಣನ ಕೈಗೆ ಕೊಟ್ಟು ಬೀಡಿ ಎಳೆಯತೊಡಗುತ್ತಾನೆ. ಲಾರಿ ಒಂದು ದೊಡ್ಡ ಮರದ ಕಡೆ ನುಗ್ಗುವುದನ್ನು ನೋಡಿದ ಡ್ರೈವರ್ ಅಬ್ಬಾಸ್ ಲಾರಿಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದರೂ ಸಾಧ್ಯವಾಗುವುದಿಲ್ಲ. ಇದರ ನಡುವೆ ಬ್ರೇಕ್ ಹಾಕಲು ಆತ ಮರೆತದ್ದರಿಂದ ಲಾರಿ ಮರಕ್ಕೆ ಢಿಕ್ಕಿ ಹೊಡೆಯುತ್ತದೆ. ಆಗ ಲಾರಿಯಲ್ಲಿದ್ದ ಅಪಾರ ತೂಕದ ದಿಮ್ಮಿಗಳು ಕ್ಯಾಬಿನ್ ಮುರಿದು ಮುಂದೆ ಬಂದಾಗ ಮರ ಹಾಗೂ ದಿಮ್ಮಿಗಳ ನಡುವೆ ಸಿಕ್ಕಿ ಹಾಕಿಕೊಂಡು ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣ ಇಬ್ಬರು ಸಾಯುತ್ತಾರೆ. ಆದರೆ ಹಿಂದಿನ ರಾತ್ರಿ ಸುಬ್ಬಣ್ಣನ ಮನೆ ಬಳಿ ಆದ ಘಟನೆ ಹಾಗೂ ಅಪಘಾತವಾದ ಸ್ಥಳದ ಬಳಿಯಿರುವ ಗೋಣಿಮರದ ಬಳಿಯಿದ್ದ ಆನೆಯ ಹೆಜ್ಜೆ ಗುರುತುಗಳನ್ನು ನೋಡಿ ಅಪಘಾತಕ್ಕೆ ಆನೆಯೇ ಕಾರಣವೆಂದು ಜನ ಭಾವಿಸುತ್ತಾರೆ. ಅಷ್ಟಕ್ಕೂ ಅಪಘಾತವಾದ ರಾತ್ರಿ ಶಿವೇಗೌಡರ ಸಾಮಿಲ್ಲಿಗೆ ಬರುತ್ತಿದ್ದ ಕಳ್ಳನಾಟವನ್ನು ಅನ್‌ಲೋಡು ಮಾಡಲು ಆನೆಯೊಂದಿಗೆ ವೇಲಾಯುಧ ಸಾಮಿಲ್ಲಿನಲ್ಲೇ ಕಾಯುತ್ತಿದ್ದ. ತಮ್ಮ ಕಳ್ಳನಾಟದ ವಿಚಾರ ಬಯಲಾಗಬಹುದೆಂದು ಈ ಸತ್ಯವನ್ನು ಯಾರು ಕೂಡ ಜನರ ಮುಂದೆ ಹೇಳದಿರುವುದರಿಂದ ನಿರಾಪರಾಧಿಯಾದ ಆನೆಯ ಮೇಲೆ ಅಪವಾದ ಬರುವಂತಾಯಿತು. ಲಾರಿ ಅಪಘಾತವಾದ ಸ್ಥಳದಲ್ಲಿ ಆನೆ ಇರಲಿಲ್ಲವಾದ್ದರಿಂದ  ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಆನೆ ನಿಜಕ್ಕೂ ಕಾರಣವಲ್ಲ.

**16. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣವೇನು?**

ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಒಂದು ರೀತಿಯ ವಿಚಿತ್ರ ಸವತಿ ಮಾತ್ಸರ್ಯ ಮೂಡಿತ್ತು. ವೇಲಾಯುಧನು ಮಾವುತನಾಗಿರುವ ಆನೆ ಹೆಣ್ಣಾನೆಯಾಗಿರುವುದರಿಂದ

ಹಾಗೂ ಅದನ್ನು ಕರೆದುಕೊಂಡು ಆತ ಹಗಲೆನ್ನದೆ ರಾತ್ರಿ ಎನ್ನದೆ ಕೆಲಸಕ್ಕೆ ಹೋಗಬೇಕಾಗಿತ್ತು. ಇದರಿಂದ ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಪ್ರಾರಂಭವಾಗಿತ್ತು. ವರ್ಷ ಕಳೆದರೂ ಬಸುರಿಯಾಗದಿರುವುದು ಹಾಗೂ ವಿನಾಕಾರಣ ಅವರ ಸಂಸಾರಕ್ಕೆ ಅನ್ನ ಕೊಡುತ್ತಿದ್ದ ಈ ಆನೆಯ ವಿಷಯದಲ್ಲಿ ಸೂಕ್ಷ್ಮವಾದ ದ್ವೇಷ ಅವಳಲ್ಲಿ ರೂಪುಗೊಳ್ಳುತ್ತಿತ್ತು. ಗಂಡಸರು ತಮ್ಮನ್ನು ಹೊರತುಪಡಿಸಿ ಬೇರೆ ಯಾರನ್ನಾದರೂ ಅಷ್ಟೊಂದು ಹಚ್ಚಿಕೊಂಡರೆ ತಮ್ಮ ಆಕರ್ಷಣ ಶಕ್ತಿಗೆ ಇವು ಸವಾಲು ಎಂದೇ ತಿಳಿದು ಕೆಲವು ಹೆಂಗಸರಿಗೆ ಸಹಜವಾಗಿ ಸಿಟ್ಟುಬರುತ್ತದೆ. ಅಂಥದ್ದೆ ಗುಣ ಹೊಂದಿರುವ ವೇಲಾಯುಧನ ಹೆಂಡತಿಗೆ ಆನೆಯಂಥ ಒಂದು ಜೀವ, ಅದೂ ಹೆಣ್ಣಾನೆ ತನ್ನ ಗಂಡನನ್ನು ಹಚ್ಚಿಕೊಂಡಿರುವುದು ಸಹಿಸಲು ಸಾಧ್ಯವಾಗಿರಲಿಲ್ಲ. ಜೊತೆಗೆ ಆಕೆಯ ಒಳ ಮನಸ್ಸಿನ ಸುಪ್ತಭಾವನೆಗಳು, ಕಾಮನೆಗಳು ಯಾವೂ ಕಾರಣವಿಲ್ಲದೆ ಕೇವಲ ಬೇಸಿಗೆಯ ಸೆಖೆ, ಧೂಳು, ನಿಶ್ಚಲ ರಾತ್ರಿಗಳೇ ಆಕೆಯಲ್ಲಿನ ಸವತಿ ಮಾತ್ಸರ್ಯಕ್ಕೆ ಕಾರಣವಿರಬಹುದು ಎಂದು ನಿರೂಪಕರು ಹೇಳುತ್ತಾರೆ.

**17. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?**

ನಾಗರಾಜನ ನಿಗೂಢ ಸಾವಿನ ಕುರಿತು ಮೂಡಿಗೆರೆಯ ಜನ ಒಬ್ಬೊಬ್ಬರು ಒಂದೊಂದು ರೀತಿಯಾಗಿ ಮಾತನಾಡಿಕೊಳ್ಳುತ್ತಿದ್ದರು. ಸಾರ್ವಜನಿಕ ಸಭೆಯಲ್ಲಾದ ಅವಮಾನ ತಾಳಲಾರದೆ ನಾಗರಾಜ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಎಂದು ಕೆಲವರು ಹೇಳುತ್ತಾರೆ. ಕೆಲವರು ಕೃಷ್ಣೇಗೌಡರ ಆನೆಯೇ ಅವನನ್ನು ದುರ್ಗಮವಾದ ಕಾಡಿನಲ್ಲಿ ಎಲ್ಲೋ ಒಂದು ಕಡೆ ಕೊಂದು ನೆಲಕ್ಕೆ ಹಾಕಿ ತಿಕ್ಕಿದೆ ಎಂದು ಸಂಶಯಿಸಿದರು. ಕೆಲವರು ನಾಗರಾಜನಿಗೆ ಇದ್ದಕ್ಕಿದ್ದಂತೆ ಮನಪರಿವರ್ತನೆಯಾಗಿ ಕೋವಿ ಚರಂಡಿಗೆ ಎಸೆದು ಧರ್ಮಸ್ಥಳ ಬಸ್ಸು ಹತ್ತಿದನೆಂದೂ, ತಲೆಬೋಳಿಸಿಕೊಂಡು ಧರ್ಮಸ್ಥಳದಲ್ಲಿ ಓಡಾಡುತ್ತಿರುವುದನ್ನು ತಾವು ಕಣ್ಣಾರೆ ಕಂಡೆವೆಂದೂ ಹೇಳಿದರು. ಕೆಲವರು ನಾಗರಾಜ ಆನೆ ಬೆನ್ನಟ್ಟಿದವನು ದಾರಿಯಲ್ಲಿ ಹಿಂದಿರುಗಿ ಬರುತ್ತಿರಬೇಕಾದರೆ ಎದುರಿಗೆ ಬಂದ ಗಂಧ ಸಾಗಾಣಿಕೆಯ ಗಂಗಾಧರನ ಕಾರಿಗೆ ಕೈ ಅಡ್ಡಹಾಕಿ ಹಿಂದುಮುಂದು ನೋಡದೆ ಅದರೊಳಗೆ ಕುಳಿತು ಆನೆಯನ್ನು ಕಾರಿನಲ್ಲಿ ಬೆನ್ನಟ್ಟುವಂತೆ ಹೇಳಿದನೆಂದೂ, ಅವನ ಗ್ಯಾಂಗೇ ಖೂನಿ ಮಾಡಿ ಹೆಣ ನಾಪತ್ತೆ ಮಾಡಿರಬೇಕೆಂದೂ ಹೇಳಿದರು. ಮತ್ತೆ ಕೆಲವರು ನಾಗರಾಜ ಗಂಗಾಧರನ ಕಾರನ್ನು ನಿಲ್ಲಿಸಿ ತಪಾಸಣೆ ಮಾಡಲು ಒಳಗೆ ಇಣುಕಿದಾಗ ಒಳಗಿದ್ದ ಒಬ್ಬ ಖೇಡಿ ನಾಗರಾಜ ತಲೆಯನ್ನು ಹೊರಗೆಳೆದುಕೊಳ್ಳದಂತೆ ಜುಟ್ಟು ಹಿಡಿದು ಕಾರಿನ ಗಾಜನ್ನು ಏರಿಸಿ ಕುತ್ತಿಗೆ ಸಿಗಿಸಿದನಂತೆ. ಕಿಟಕಿಯಲ್ಲಿ ಕುತ್ತಿಗೆ ಸಿಕ್ಕಿಕೊಂಡು ವಿಲವಿಲ ಒದ್ದಾಡುತ್ತಿದ್ದ ನಾಗರಾಜನ ಸಮೇತ ಕಾರು ಚಾರ್ಮಾಡಿ ಕಡೆಗೆ ದೌಡಾಯಿಸುತ್ತಿದ್ದುದನ್ನು ಕೆಲವರು ನೋಡಿದಾರೆಂದು ಮಾತನಾಡಿಕೊಳ್ಳುತ್ತಿದ್ದರು. ಸುಳ್ಳು ಯಾವುದು, ನಿಜ ಯಾವುದು ಎಂದು ಬೇರ್ಪಡಿಸಲಾಗದಂತಹ ಅಭಿಪ್ರಾಯಗಳು ಕೇಳಿ ಬರುತ್ತಿದ್ದವು.



**18. ತನ್ನ ಆನೆಯ ಬಗ್ಗೆ ಕೃಷ್ಣೇಗೌಡನಲ್ಲಿ ಬೇಸರ ಮೂಡಲು ಕಾರಣಗಳೇನು?**

ಆನೆ ಬಂದಮೇಲೆ ದುಡ್ಡಿನ ಮುಖ ನೋಡಿದ ಕೃಷ್ಣೇಗೌಡ ಹಿಂದೊಮ್ಮೆ ಆನೆಯನ್ನು ಮನೆಗೆ ಬಂದ ಲಕ್ಷ್ಮೀ ಎಂದುಕೊಂಡಿದ್ದ. ಆದರೆ ಇದೀಗ ಆನೆಯ ಬಗ್ಗೆ ಬರುತ್ತಿರುವ ದೂರುಗಳಿಂದ ರೋಸಿಹೋಗಿದ್ದರಿಂದ ಆನೆ ಕುತ್ತಿಗೆಗೆ ಕಟ್ಟಿಕೊಂಡ ಕಲ್ಲುಗುಂಡಿನಂತೆ ಆತನಿಗೆ ಭಾಸವಾಯಿತು. ಊರಿನವರು, ಕರೆಂಟು, ಫಾರೆಸ್ಟ್, ಟೆಲಿಫೋನ್ ಡಿಪಾರ್ಟ್‌ಮೆಂಟಿನವರು ಸೇರಿದಂತೆ ಇತರ ಇಲಾಖೆಯವರು ಊರಿನಲ್ಲಿ ನಡೆಯುವ ದುರಂತ, ಅನಾಹುತಗಳಿಗೆ ಆನೆಯನ್ನೆ ಹೊಣೆಯನ್ನಾಗಿಸುತ್ತಿದ್ದರು. ಇದರಿಂದ ನಿತ್ಯ ಕೃಷ್ಣೇಗೌಡ ಕಿರುಕುಳವನ್ನು ಅನುಭವಿಸುತ್ತಿದ್ದ. ಜೊತೆಗೆ ಮರದ ವ್ಯಾಪಾರಿಗಳಂತೂ ಸರ್ಕಾರದ ಬಿಗಿ ಧೋರಣೆಯಿಂದ ಮತ್ತು ಲಂಚದ ಕಾಟದಿಂದ ಸುಸ್ತಾಗಿ ಹೋಗಿದ್ದರಿಂದ ಆತನಿಗೆ ಈಚೆಗೆ ಆನೆ ಹೆಚ್ಚು ಲಾಭವಾಗುತ್ತಿರಲಿಲ್ಲ. ಇನ್ನು ಜಗದ್ಗುರುಗಳೆಲ್ಲ ಅಡ್ಡಪಲ್ಲಕಿ ಇಲ್ಲವೇ ಬೆಂಜ್ ಕಾರುಗಳನ್ನು ಹಿಡಿದಿದ್ದಾರೆ. ಸರ್ಕಸ್ ಕಂಪನಿಗಳು ಪಾಪರ್ ಎದ್ದಿವೆ. ಕಾಡಿಗೆ ಅಟ್ಟೋಣವೆಂದರೆ ಅದು ಊರಿನ ಆನೆ. ಒಮ್ಮೆ ಕಾಡಿಗೆ ಹೋಗಿದ್ದು ಸಹ ಮತ್ತೆ ಮರಳಿ ಬಂದು ಲಾಯದಲ್ಲಿ ನಿಂತಿತ್ತು. ಈ ಎಲ್ಲಾ ಕಾರಣಗಳಿಂದ ಕೃಷ್ಣೇಗೌಡರಿಗೆ ಆನೆಯ ಬಗ್ಗೆ ಬೇಸರ ಮೂಡಿತು.

## ಭಾಷಾಭ್ಯಾಸ:

**1. ಈ ಪದಗಳ ಅರ್ಥ ವ್ಯತ್ಯಾಸ ಬರೆಯಿರಿ :**

ನಾಟಿ = ಭತ್ತದ ಸಸಿ.
ನಾಟು = ಆಳಕ್ಕೆ ಚುಚ್ಚುವುದು.
ನಾಟ = ಮರದ ದಿಮ್ಮಿ.

**2. ನಾನಾರ್ಥ ರೂಪಗಳನ್ನು ಬರೆಯಿರಿ :**

ಅಡಿ = ಅಳತೆ, ಕೆಳಗೆ, ಪಾದ.
ಕಳೆ = ಶೋಭಿಸು, ಕಸ, ಕಳೆದುಹೋಗು.
ಬಗೆ= ರೀತಿ, ಭಾವಿಸು.
ಹಿಡಿ = ಮುಷ್ಟಿಯಷ್ಟು, ಹಿಡಿದುಕೊಳ್ಳುವುದು.
ಹದ್ದು = ಒಂದು ಜಾತಿಯ ಪಕ್ಷಿ, ಗಡಿ, ಅಂಕೆ (ಹಿಡಿತ).